ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೫, ಅಕ್ಟೋಬರ್ ೨೦೧೬

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಗಣೇಶೋತ್ಸವ - ವರದಿ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೫

ರಾಂ ರಾಮ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೨

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೪

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೫

ಸಿಡ್ನಿ ಗಣೇಶೋತ್ಸವ ವರದಿ

ಪುಟ ೨

ಸಂಪಾದಕೀಯ

ಬದರಿ
ತ್ಯಾಮಗೊಂಡ್ಲು

ಮೈಸೂರು ದಸರಾ ಹಬ್ಬವು ಸಾಂಸ್ಕೃತಿಕವಾಗಿ ಆಚರಿಸಲ್ಪಟ್ಟು ತನ್ಮೂಲಕ ಜನರನ್ನು ಸೆಳೆಯುವುದನ್ನು ಎಲ್ಲರೂ ನೋಡಿರುತ್ತೇವೆ. ರಾಜವೈಭವದ ಆ ಐಭೋಗವನ್ನು, ಇಂದಿನ ಪ್ರಜಾಪ್ರಭುತ್ವದ ದಿನಗಳಲ್ಲೂ ಸಂತೋಷದಿಂದ ಆಚರಿಸಲ್ಪಡುತ್ತಿದ್ದೀವಿ ಎಂದರೆ, ಅದು ಕೇವಲ ರಾಜಮಹಾರಾಜರ ಹಬ್ಬವಾಗಿರದೆ, ನಾಡಹಬ್ಬವಾಗಿ ಜನಸಾಮಾನ್ಯರ ಮನ್ನಣೆ ಪಡೆದಿತ್ತು ಎಂಬುದು ಗೊತ್ತಾಗುತ್ತದೆ.

ಅನೇಕಬಾರಿ, ನಾವು ವಿಶಿಷ್ಟತೆಯನ್ನು ಇಷ್ಟಪಟ್ಟರೂ, ಅದನ್ನು ಬಳಕೆ ಮಾಡುವುದರಲ್ಲಿ ಹಿಂದೆಬೀಳುತ್ತೀವಿ. ಎಲ್ಲರ ಮನೆಯಲ್ಲಿ ಬೊಂಬೆ ಕೂರಿಸುತ್ತಿದ್ದ ಕಾಲವೊಂದಿತ್ತು. ಮನೆಯವರೆಲ್ಲರೂ, ಬಹುಮುಖ್ಯವಾಗಿ ಮುಂದಿನ ಪೀಳಿಗೆಯವರಾದ ಮಕ್ಕಳನ್ನು ಸೇರಿಸಿಕೊಂಡು ಆ ಚಂದದ ಒಪ್ಪ ಓರಣದಿಂದ ಕಂಗೊಳಿಸುವ ಬೊಂಬೆ ಮೆಟ್ಟಿಲು, ಮೊಳಕೆಯೊಡೆಯುವ ಪೈರು, ರಂಗೋಲಿ ಇತ್ಯಾದಿಯನ್ನು ನವರಾತ್ರಿ ಹಬ್ಬಕ್ಕೆಂದು ಅಣಿ ಮಾಡುತ್ತಿದ್ದರು. ಈಗಲೂ ಸಾಕಷ್ಟು ಜನರು ಮಾಡುತ್ತಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಹೇಳೋಣ. ಈ ಪೀಠಿಕೆಯು ಏಕೆಂದರೆ, ನಾವು ಭಾಷೆಯ ವೈವಿಧ್ಯತೆಯನ್ನು ಮರೆಯುತ್ತಿರುವುದಕ್ಕೆ ಮತ್ತು ಅದನ್ನು ಮುಂದಿನ ಪೀಳಿಗೆಯವರು ಮುಂದುವರಿಸಿಕೊಂಡು ಹೋಗುವುದಕ್ಕೆ ಅನುವು ಮಾಡಿಕೊಡದಿರುವುದಕ್ಕೆ.

ಕನ್ನಡ ಭಾಷೆಯ ಪ್ರಯೋಗವೇ ಕಡಿಮೆಯಾಗುತ್ತಿರುವಾಗ, ಇದೆಂತಹ ವೈವಿಧ್ಯತೆಯ ಮಾತಿಲ್ಲಿ ಎಂದು ಚಕಿತರಾಗಬಹುದು. ನಿಜ ಭಾಷೆಯ ಬಳಕೆಯ ಬಗ್ಗೆ ಒತ್ತು ಕೊಡುತ್ತ ಈ ವೈವಿಧ್ಯತೆಯನ್ನು ಎತ್ತಿಕೊಳ್ಳಬೇಕು. ಈ ವೈವಿಧ್ಯತೆಯಾದರೂ ಯಾವುವು ಎನ್ನುವಿರಾ. ಅದಕ್ಕೊಂದು ಸೀಮಿತ ಚೌಕಟ್ಟಿಲ್ಲ. ಉದಾಹರಣೆ ಕೊಡುವುದಾದರೆ, ಅದು ನಮ್ಮ ಜಾನಪದ ಗೀತೆಗಳು, ಗೀಗಿ ಪದಗಳು, ಆರತಿ ಹಾಡುಗಳು, ಮದುವೆ ಇತ್ಯಾದಿ ಆಚರಣೆಗೆಂದೇ ಹಾಡುತ್ತಿದ್ದ ಅದ್ಭುತ ಪದ್ಯಗಳು. ಇದರ ಜೊತೆಗೆ ಛಂದೋಬದ್ಧ ಕಾವ್ಯ ಪರಂಪರೆ, ಗದ್ಯಗಳು, ನಾಟಕಗಳು, ವ್ಯಾಕರಣಾದಿಗಳು, ಒಂದೇ ಎರಡೇ. ಈ ಒಂದೊಂದು ಬಗೆಯನ್ನೂ ದಸರೆಯ ಜಂಬೂಸವಾರಿಯಲ್ಲಿ ಬರುವ ಬಗೆಬಗೆಯ ಪ್ರದರ್ಶನಕ್ಕೆ ಹೋಲಿಸಿ ನೋಡಿ. ಹೇಗೆ ಆ ವಿಜಯದಶಮಿಯ ಜಂಬೂ ಸವಾರಿಯನ್ನು ಆಸಕ್ತಿಯಿಂದ ವೀಕ್ಷಿಸಿ ಆನಂದಿಸುತ್ತೇವೆಯೋ, ಈ ಭಾಷಾ ವೈವಿಧ್ಯತೆಯನ್ನು ಕೇಳಿದಾಗ, ಉಪಯೋಗ ಮಾಡಿ ನೋಡಿದಾಗ, ಅಂತಹುದೇ ಸಂತೋಷವು ನಮಗಾಗುತ್ತದೆ.

ಗದುಗಿನ ವೀರನಾರಯಣನ ಮೂಲಕ ಭಾರತದರ್ಶನ ಮಾಡಿಸುವ ಕುಮಾರವ್ಯಾಸನ ಷಟ್ಪದಿಯನ್ನು ಒಮ್ಮೆ ಓದಿ ನೋಡಿ. ಷಟ್ಪದಿಯನ್ನು ಹೇಗೆ ರಚಿಸಿಬಹುದು ಎಂದು ತಿಳಿದುಕೊಂಡರೆ, ನೀವೇ ಒಂದು ಪುಟ್ಟ ಕಾವ್ಯವನ್ನು ರಚಿಸಬಹುದು. ಯಾವುದೂ ಕಷ್ಟವಲ್ಲ, ಆಸಕ್ತಿಯ ಬೀಜವನ್ನು ನೆಡಬೇಕು. ಅದು ಖಂಡಿತವಾಗಿಯೂ ಮೊಳಕೆಯೊಡೆಯುತ್ತದೆ. ಇನ್ನೂ ಸುಲಭವಾದ ಕಾವ್ಯ ರಚನಾ ಕ್ರಮವು ಬೇಕೆ, ಮುಕ್ತವಾಗಿ ಭಾವಪೂರ್ಣತೆಯಿಂದ ಪದ್ಯ ರಚಿಸಿ. ನಂತರ ಅದನ್ನು ಯಾವುದಾದರೂ ಛಂದಸ್ಸಿಗೆ ಸರಿಹೊಂದಿಸಬಹುದೇ ಎಂದು ನೋಡಿ. ಅದೂ ಬೇಡವೇ. ಒಂದು ಪುಟ್ಟ ಕಥೆ ಬರೆಯಿರಿ. ನಾಲ್ಕು ಜನರ ಜೊತೆ ಹಂಚಿಕೊಳ್ಳಿ. ಸಾಹಿತ್ಯದ ಯಾವುದಾದರೂ ಕೃಷಿ ಮಾಡಿ. ಶುರುಮಾಡಿ ಎಂಬುದಷ್ಟೇ ವಿನಂತಿ.

ನೆನಪಿಡಿ, ನೀವು ನೆಟ್ಟ ಸಾಹಿತ್ಯ ಬೀಜವೇ ಮುಂದೆ ಹೆಮ್ಮರವಾಗಿ ಬರುವ ತಲೆಮಾರನ್ನು ಕಾಯಬೇಕೇ ಹೊರತು ಬರಲಿರುವ ನವೆಂಬರ್ ಕನ್ನಡೋತ್ಸವವಲ್ಲ. ಆಸಕ್ತಿ ಮತ್ತು ಉತ್ಸಾಹದಿಂದ ನೀವು ಮಾಡುವ ಒಂದೊಂದು ಕನ್ನಡಪರ ಕೆಲಸವೂ ಒಂದೊಂದು ಹಣತೆಯನ್ನು ಹಚ್ಚಿದಂತೆ. ದೀಪಾವಳಿಯಲ್ಲಿ ಸಾಲು ಸಾಲಾಗಿ ದೀಪಗಳನ್ನು ಇಟ್ಟು ಹೇಗೆ ಬೆಳಕನ್ನು ನೋಡಿ ಸಂಭ್ರಮಿಸುತ್ತೇವೆಯೋ, ಹಾಗೆಯೇ ಕನ್ನಡದ ಸಾಹಿತ್ಯದಲ್ಲಿನ ವೈವಿಧ್ಯತೆಗಳನ್ನು ತಿಳಿದುಕೊಳ್ಳೋಣ. ಹಾಗೆ ಮಾಡುವುದರಿಂದ ನಮ್ಮೊಳು ಜಗಮಗಿಸುವ ಕನ್ನಡದಕ್ಷರದ ಬೆಳಕನ್ನು ಕಂಡು ಈ ಬಾರಿಯ ದೀಪಾವಳಿಯನ್ನು ಆಚರಿಸೋಣ. ▪

ಎರಡು ತಿಂಗಳ ಪ್ರಮುಖ ದಿನಗಳು

ಅಕ್ಟೋಬರ್ - ಶ್ರೀದುರ್ಮುಖಿ ನಾಮ ಸಂವತ್ಸರ,
ದಕ್ಷಿಣಾಯಣ, ಶರದ್ ಋತು, ಆಶ್ವಯುಜ/ಕಾರ್ತೀಕ ಮಾಸ

01 ಶ - ಆಶ್ವಯುಜ ಮಾಸ / ನವರಾತ್ರಿ ಆರಂಭ
02 ಭಾ – ಗಾಂಧಿ/ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ
07 ಶು – ಸರಸ್ವತಿ ಪೂಜೆ 09 ಭಾ - ದುರ್ಗಾಷ್ಟಮಿ
10 ಸೋ – ಮಹಾನವಮಿ / ಆಯುಧ ಪೂಜೆ
11 ಮಂ - ವಿಜಯ ದಶಮಿ 12 ಬು - ಮೊಹರಂ 10ನೇ ದಿನ
15 ಶ - ಮಹರ್ಷಿ ವಾಲ್ಮೀಕಿ ಜಯಂತಿ 16 ಭಾ - ಹುಣ್ಣಿಮೆ
17 ಸೋ – ತುಲಾ ಸಂಕ್ರಮಣ, 19 ಬು - ಸಂಕಷ್ಟ ಚತುರ್ಥಿ/ಕರವಾ ಚೌತ್
26 ಬು - ರಾಮಾ ಏಕಾದಶಿ
29 ಶ – ನರಕ ಚತುರ್ದಶಿ, 30 ಭಾ – ಅಮಾವಾಸ್ಯೆ ಲಕ್ಷ್ಮಿ ಪೂಜೆ
31 ಸೋ - ಬಲಿ ಪಾಡ್ಯಮಿ / ಕಾರ್ತಿಕ ಮಾಸ ಆರಂಭ

ನವೆಂಬರ್ - ಶ್ರೀ ದುರ್ಮುಖಿ ನಾಮ ಸಂವತ್ಸರ,
ದಕ್ಷಿಣಾಯಣ ಶರದ್/ ಹೇಮಂತ ಋತು, ಕಾರ್ತೀಕ/ಮಾರ್ಗಶಿರ ಮಾಸ

01 ಭಾ - ಕನ್ನಡ ರಾಜ್ಯೋತ್ಸವ ದಿನ
10 ಗು - ಪ್ರಭೋಧಿನಿ ಏಕಾದಶಿ
11 ಶು - ಉತ್ಥಾನ ದ್ವಾದಶಿ
17 ಗು - ಕನಕದಾಸರ ಜಯಂತಿ/ಸಂಕಷ್ಟ ಚತುರ್ಥಿ
14 ಸೋ - ಗುರು ನಾನಕ್ ಜನ್ಮದಿನ/ಮಕ್ಕಳ ದಿನ
25 ಶು - ಉತ್ಪನ್ನ ಏಕಾದಶಿ
29 ಮಂ – ಛಟ್ಟಿ ಅಮಾವಾಸ್ಯೆ
30 ಬು - ಮಾರ್ಗಶಿರ ಮಾಸ ಆರಂಭ

ಕಡೆಗೂ ಕಾದಿದ್ದ ಗಣೇಶೋತ್ಸವವು ಬಂದೇ ಬಿಟ್ಟಿತು. ಅದರ ಸಂಭ್ರಮ, ಸಡಗರಗಳ ಭಾವೋದ್ರೇಕವನ್ನು ಅನುಭವಿಸಿಯೇ ತಿಳಿಯಬೇಕು. ಸಂತಸ, ಶಕ್ತಿ ಮತ್ತು ಭರವಸೆಯ ಸಂಕೇತವಾದ ಗಣಪತಿಯ ಉತ್ಸವಕ್ಕೆ, ಸಮುದಾಯವು ಕಡಿಮೆ ಎಂದರೆ ಆರು ತಿಂಗಳ ಹಿಂದಿನಿಂದಲೇ ಪೂರ್ವಸಿದ್ಧತೆಯನ್ನು ಆರಂಭಿಸುತ್ತದೆ. ಚಿಕ್ಕದಾಗಿ ಕುಟುಂಬಗಳ ಮಟ್ಟಿಗೆ ಪ್ರಾರಂಭವಾದ ಈ ಆಚರಣೆಯು, ಈಗ ಇಲ್ಲಿನ ಒಂದು ಗಮನಾರ್ಹ ಉತ್ಸವವಾಗಿದ್ದು, ನಮ್ಮ ಏಕತೆಯ ಸಂಕೇತವಾಗಿದ್ದು ಮತ್ತು ನಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಬಿಂಬಿಸುವ ವೇದಿಕೆಯಾಗಿದ್ದು ಎಲ್ಲ ಆಸಕ್ತರಿಗೆ ಮತ್ತು ಕಾರ್ಯಕರ್ತರಿಗೆ ತಮ್ಮ ಸೃಜನಾತ್ಮಕ ಕಲ್ಪನೆಗಳನ್ನು ಸಾಕಾರಗೊಳಿಸಿ ಸಾದರ ಪಡಿಸುವ ಅಪೂರ್ವ ಅವಕಾಶವಾಗಿದೆ.

ಈ ಬಾರಿಯ ಗಣೇಶೋತ್ಸವದಲ್ಲಿ ಸುಂದರವಾದ ಪೂಜಾ ವೇದಿಕೆ ಮತ್ತು ಮಂಟಪದಲ್ಲಿ, ಕುಶಲಿಕಾರ್ಯಕರ್ತರ ಕಲ್ಪನೆಗಳ ಗರಿಕೆದರಿ ಹಾರುತ್ತಿದ್ದುದು ಗೋಚರವಾಗುತ್ತಿತ್ತು. ಇಪ್ಪತ್ತಕ್ಕೂ ಹೆಚ್ಚಿನ ಕಾರ್ಯಕರ್ತರು ಅಥವಾ ಕುಶಲಿಗಳು ತಮ್ಮ ಮನಸ್ಸು, ಸಮಯ ಮತ್ತು ಸೃಜನಾತ್ಮಕ ಕ್ರಿಯೆಗಳನ್ನು ಸಾಕಾರಗೊಳಿಸಿ, ಗಣೇಶನೊಬ್ಬನಿಗೇ ಮೀಸಲಾಗಿರುವಂತೆ ಕಣ್ಮನ ತಣಿಸುವ ವೈಭವವನ್ನು ಸೃಷ್ಟಿಸಿದ್ದರು. ಅದಕ್ಕೆ ಒಪ್ಪುವಂತೆ ಕಡೆಯ ದಿನದ ಮೆರವಣಿಗೆಗಾಗಿ ಸಿದ್ಧವಾಗಿದ್ದ ರಥವು ಇನ್ನೊಂದು ಅನುಪಮ ರಚನೆಯಾಗಿತ್ತು.

ಈ ವರ್ಷದ ಉತ್ಸಾಹದ ಆಚರಣೆಯಲ್ಲಿ, ಸುಮಾರು ೫೦೦೦ ಮಂದಿ ಮಂದಿ ಪಾಲ್ಗೊಂಡಿದ್ದಕ್ಕೆ ನಾವು ಸಾಕ್ಷಿಗಳಾದೆವು. ಶುಕ್ರವಾರವು ಉತ್ಸವದ ಮೊದಲನೇ ದಿನವಾಗಿದ್ದು ಅಂದು ಮೋಜಿನ ತಯಾರಿಯ ದಿನ. ಶನಿವಾರದ ಬೆಳಿಗ್ಗೆ ಬಹಳಷ್ಟು ತಂದೆ, ತಾಯಿಯರು ತಮ್ಮ ಮುಂದಿನ ಪೀಳಿಗೆಗಳಾದ ಮಕ್ಕಳುಗಳು ಸ್ವಯಂ ತಾವು ಪೂಜೆ ಮಾಡುತ್ತಿದ್ದುದನ್ನು ಕಣ್ಮನಗಳಲ್ಲಿ ತುಂಬಿಕೊಂಡು ಪುಳಕಿತಗೊಂಡರು. ಪೂಜೆಯು ಸಾಂಪ್ರದಾಯಕವಾಗಿ ನಡೆದಿದ್ದು ಭಾಗವಹಿಸಿದ ಮಕ್ಕಳಿಗೆ ಅಪೂರ್ವ ಅನುಭವವಾಗಿತ್ತು. ನಮ್ಮ ಸಂಪ್ರದಾಯಗಳ ಬಗ್ಗೆ ಅರಿವು ಮೂಡುವಂತೆ ಮಾಡಿದ್ದು ಮಾತ್ರವಲ್ಲದೇ ಅಂತಹ ಆಚರಣೆಗಳ ಹಿಂದಿನ ಅರ್ಥ ಮತ್ತು ಕಾರಣಗಳನ್ನು ಅವರಿಗೆ ತಿಳಿಸಲ್ಪಟ್ಟಿತು. ನಮ್ಮ ಜೀವನ ವಿಧಾನದಲ್ಲಿ ಮಕ್ಕಳಿಗೆ ಇರುವ ನಂಬಿಕೆಯನ್ನು ದೃಢಪಡಿಸಬಹುದೆಂಬ ಆಶಯದಿಂದ ಈ ಬಾರಿಯಷ್ಟೇ ಸೇರ್ಪಡೆಯಾದ ಗಮನಾರ್ಹ ಕ್ರಿಯೆ ಇದು. ಎಲ್ಲರೂ ಆಸಕ್ತಿಯಿಂದ ಭಾಗವಹಿಸಿ ಪೂಜೆಯನ್ನು ಮಾಡುತ್ತಿರುವುದು, ಇನ್ನಿತರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದನ್ನು ಮತ್ತು ಪ್ರೇಕ್ಷಕರಾಗಿರುವುದನ್ನು ಕಂಡಮೇಲೆ, ನಮ್ಮ ಈ ಸಂಪ್ರದಾಯಗಳು ಸ್ಥಿರವಾಗಿರುತ್ತವೆ ಹಾಗೂ ನಮ್ಮದಾಗಿಸಿಕೊಂಡ ಈ ದೇಶದಲ್ಲಿ ನಮ್ಮ ಸಮುದಾಯದ ನೆಲೆಗಟ್ಟಾಗಿ ವರ್ಧಿಸುತ್ತದೆ ಎಂಬುದು ದೃಢವಾಯಿತು.

ಶನಿವಾರ ಸಂಜೆ, ಸಾಂಸ್ಕೃತಿಕ ಸಂಜೆಯಾಗಿದ್ದು ಕಣ್ಣು ಕೋರೈಸುವ ವೈಭವದ ನೃತ್ಯ ಗಾಯನಗಳನ್ನು ಸಿಡ್ನಿಯ ಜನರೆಲ್ಲ ಅನುಭವಿಸಲು ಕಾತರಿಸಿ ಕಾಯುವ ಸಂಜೆ. ಈ ಬಾರಿ ೧೫ಕ್ಕೂ ಹೆಚ್ಚಿನ ನೃತ್ಯ ಹಾಗೂ ಸಂಗೀತದ ಪ್ರಕಾರಗಳು ಪ್ರದರ್ಶಿಸಲ್ಪಟ್ಟವು. ಬಹಳಷ್ಟು ಸಂಘ ಸಂಸ್ಥೆಗಳ ಗಣ್ಯರು, ಸ್ಥಳೀಯ ರಾಜಕಾರಿಣಿಗಳು ಮುಂತಾದ ಮಾನ್ಯರಿಂದ ಕೂಡಿದ ಈ ಕಾರ್ಯಕ್ರಮದಲ್ಲಿ, ನುರಿತ ಕಲಾವಿದರು ಮತ್ತು ಮಕ್ಕಳ ಪ್ರದರ್ಶನವು ಎಲ್ಲರನ್ನೂ ಭಾವೋದ್ರೇಕದ ಉತ್ತುಂಗಕ್ಕೆ ಕರೆದೊಯ್ಯಿತು. ಪ್ರತಿಯೊಂದು ಹೆಜ್ಜೆ, ಪ್ರತಿಯೊಂದು ಚಲನೆಗಳ ಹರಿವನ್ನೂ ಪರಿಪೂರ್ಣಗೊಳಿಸಲು ಆರು ತಿಂಗಳಿಗೂ ಹೆಚ್ಚಿನ ಅವರುಗಳ ಅಭ್ಯಾಸಕ್ಕೆ ಒಡ್ಡಿದ ಪರೀಕ್ಷೆಯಾಗಿದ್ದು, ಅಂದು ವಿಟ್ಲಾಮ್ ಸೆಂಟರ್ ನಲ್ಲಿ ಕಾರ್ಯಕ್ರಮದ ಶೋಭೆಯಾಗಿ, ಕಲಾವಿದರನ್ನು ಉತ್ತೇಜಿಸಲು ಸೇರಿದ್ದ ಜನಗಳ ಮಹಾಪೂರದ ಹರ್ಷೋದ್ಗಾರಗಳು ಮುಗಿಲು ಮುಟ್ಟುವಂತಿತ್ತು.

ಮುಂದಿನ ಪುಟ ನೋಡಿ ...

ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗಿಂತ ಮಿಗಿಲಾದದ್ದೆಂದರೆ ಮಹಾಪ್ರಸಾದ ವಿತರಣೆಯ ಸೇವೆ. ಅಡಿಗೆಯ ತಯಾರಿ, ವಿತರಣೆ ಮತ್ತು ಶುಚಿಗೊಳಿಸುವುದರ ಯೋಜನೆಗಳು ಮತ್ತು ನಿರ್ವಹಣೆಗಳಿಗೆ ತಿಂಗಳುಗಳ ಹಿಂದಿನ ಮತ್ತು ಕಾರ್ಯಕ್ರಮದ ಮೂರು ದಿನಗಳ ನಂತರದಲ್ಲೂ ಬಹಳಷ್ಟು ಸಮಯದ ಶ್ರಮವಿರುತ್ತದೆ. ಆಹಾರ ವಿತರಣಾ ಸೇವೆಯನ್ನು ಒಂದು ಭಾರತೀಯ ಭವ್ಯ ಮದುವೆಯ ಸಮಾರಂಭದ ಸಂಭ್ರಮಕ್ಕೆ ಹೋಲಿಸಬಹುದು. ಆಹಾರದ ಗುಣಮಟ್ಟ, ಸತ್ಕಾರ ಮತ್ತು ಸೇವೆಯು ಅದ್ವಿತೀಯವಾಗಿದ್ದು, ಮೂರು ದಿನಗಳಲ್ಲಿ ಸೇವಾ ಮನೋಭಾವದ ಕಾರ್ಯಕರ್ತರುಗಳು ವಿತರಿಸಿದ ಸುಮಾರು ೬೦೦೦ ಊಟಗಳು ಒಂದು ಅದ್ಭುತ ಸಾಧನೆಯೇ ಸರಿ. ಶನಿವಾರ ರಾತ್ರಿಯೇ ೩೦೦೦ ಕ್ಕೂ ಹೆಚ್ಚಿನ ಜನರಿಗೆ ಒಂದೇ ಘಂಟೆಯೊಳಗೆ ಯಾವ ಸಮಸ್ಯೆಯೂ ಇಲ್ಲದೇ ಮಹಾಪ್ರಸಾದವನ್ನು ವಿತರಿಸಲಾಯಿತೆಂಬುದನ್ನು ಗಮನಿಸಿದಾಗ, ಕಾರ್ಯಕರ್ತರಿಗೆ ಊಟವನ್ನು ಬಡಿಸುವುದೊಂದು ಹಿತಕರವಾದ, ಖುಶಿ ಕೊಡುವ ಅನುಭವವೆನಿಸುತ್ತದೆ. ನೂರಾರು ಕಾರ್ಯಕರ್ತರನ್ನು ಆಹಾರ ವಿತರಿಸಲು ಕೆಲವೇ ಘಂಟೆಯೊಳಗೆ ಒಟ್ಟುಗೂಡಿಸಿದ್ದು, ನಿರ್ವಹಣಾ ತಂಡವು ಸಾವಿರಾರು ಜನಗಳಿಗೆ ಹಸನ್ಮುಖರಾಗಿ ಯಾವ ಪ್ರಮಾದವೂ ಇಲ್ಲದಂತೆ ಮಹಾಪ್ರಸದವನ್ನು ವಿತರಿಸುವ ಪರಿಪೂರ್ಣವಾದ ಯೋಜನೆಯನ್ನು ರಚಿಸಿ ಕಾರ್ಯರೂಪಕ್ಕೆ ತಂದಿದ್ದರು. ಸ್ವಯಂ ಸೇವೆಯು ಒಂದು ಜವಾಬ್ದಾರಿಯೆನಿಸದೇ ಗೌರವವೆಂದು ಪರಿಗಣಿಸಿ ನಿರ್ವಹಿಸುವ ಕಾರ್ಯಕ್ರಮವಿದು. ಇಲ್ಲಿ ಬೇಕಾದಾಗ ಸೇವೆಗಾಗಿ ಮುಂದೆಬರುವ ಕಾರ್ಯಕರ್ತರ ಮಹಾಪೂರವನ್ನೇ ಕಾಣಬಹುದು. ಇದರಿಂದ ಈ ಕಾರ್ಯಕ್ರಮವು ಉತ್ಸವಕ್ಕಿಂತ ಮಿಗಿಲಾದದ್ದೆನಿಸುತ್ತದೆ. ಇದು ಸಾವಿರಾರು ಮಂದಿಯ ಹೃದಯ ಮತ್ತು ಆತ್ಮಗಳನ್ನು ಬೆಸೆಯುವ ಅವಕಾಶವಾಗಿದೆ.

ಉತ್ಸವದ ಕಡೆಯ ದಿನ ಎಂದರೆ ಭಾನುವಾರವು, ಎಲ್ಲ ಒಳ್ಳೆಯ ವಿಷಯಗಳಿಗೂ ಕೊನೆ ಇರಲೇಬೇಕೆಂಬ ಕಟುಸತ್ಯವನ್ನು ನೆನಪಿಸುತ್ತದೆ. ಈ ಬಾರಿಯ ಯಾವ ಯಾವ ವಿಷಯಗಳನ್ನು ಸರಿಪಡಿಸಿ ಮುಂದುವರೆಯಬಹುದೆಂಬ ಆಲೋಚನೆಗಳು ಜನರಲ್ಲಿ ಮೂಡಿ ಹೊಸ ಹುರುಪು, ಹೊಸ ಉತ್ಸಾಹಗಳಿಂದ ಮುಂದುವರೆಯುವಂತೆ ಮಾಡುವ ದಿನವೂ ಇದಾಗಿದೆ. ಪ್ರತಿವರ್ಷದಂತೆ ಸಾಂಪ್ರದಾಯಿಕವಾಗಿ ಶ್ರೀ ಸತ್ಯನಾರಾಯಣ ಪೂಜೆಯಿಂದ ಆರಂಭವಾದ ಈ ದಿನ, ಕೊನೆಯ ದಿನದಂದು ನಮ್ಮ ವಿಶಿಷ್ಟ ಲಾಂಛನ ಎಂದು ಹೇಳಬಹುದಾದ ಚಿಣ್ಣರ ವಿವಿಧ ವೇಷಭೂಷಣಗಳ ಕಾರ್ಯಕ್ರಮದಿಂದ ಮುಂದುವರೆದು, ನಮ್ಮ ಸಮುದಾಯದ ಸ್ತ್ರೀಯರ ತಂಡದ ವಿಸ್ಫೋಟಕ ನೃತ್ಯ ಕಾರ್ಯಕ್ರಮವಿದ್ದಿತು. ಬಾಲಿವುಡ್ ಬೀಟ್ಸ್ ಗಳನ್ನು ಬಾರಿಸಿ ಮನರಂಜಿಸುತ್ತಿದ್ದ ಸಂಗೀತಕ್ಕೆ ಸರಿಯಾಗಿ ಎಳೆಯರು ವಯಸ್ಕರೆನ್ನದೇ ಎಲ್ಲರೂ ಇಡಿಯ ಸಭಾಂಗಣವನ್ನೇ ನರ್ತನ ವೇದಿಕೆಯನ್ನಾಗಿಸಿ ನರ್ತಿಸಿದರು. ಇದರ ಸಂಭ್ರಮವು ತಾರಕಕ್ಕೇರಿದ ಹಿಂದೆಯೇ ಶಿವಘರ್ಜನೆಯವರ ಡೋಲುಗಳ ಶಬ್ದವು ಭಾವಣಿಯನ್ನು ಹಾರಿಸುವಂತಿದ್ದು ಸಭಾಂಗಣದಲ್ಲಿದ್ದ ಎಲ್ಲರನ್ನೂ ನರ್ತನಕ್ಕೆ ಆಹ್ವಾನವಿತ್ತಿತು. ಇಡಿಯ ವಿಟ್ಸ್ಯಾಂ ಸೆಂಟರ್ ಜೈ ಗಣೇಶ ಮತ್ತು ಗಂಟೆಗಳ ಸದ್ದಿನಿಂದ ತುಂಬಿ ಹೋಗಿ ಸಾಂಸ್ಕೃತಿಕ ಏಕತೆ ಮತ್ತು ಉತ್ಸವಗಳ ದಿವ್ಯ ಪ್ರಭೆ ಮತ್ತು ವಾತಾವರಣವನ್ನು ಸೃಷ್ಟಿಸಿತು. ಗಣೇಶನಿಗೆ ಒಪ್ಪುವಂತೆ ಸಂಭ್ರಮ ಹಾಗೂ ಸಡಗರಗಳಿಂದ, ಸುಂದರ ಮತ್ತು ಕಲಾತ್ಮಕವಾಗಿ ರಚಿಸಿದ ರಥದಲ್ಲಿರಿಸಿ, ಡೋಲು ಮುಂತಾದ ವಾದ್ಯಗಳಿಂದ ಹಾಗೂ ಸಂತೋಷವಾಗಿ ಉತ್ಸವದಲ್ಲಿ ತೊಡಗಿಸಿಕೊಂಡಿದ್ದ ನೂರಾರು ಭಕ್ತಾದಿಗಳಿಂದ ಕೂಡಿ ಮೆರವಣಿಗೆಯಲ್ಲಿ ಕೊಂಡೊಯ್ದು ಚಿಪ್ಪಿಂಗ್ ನಾರ್ಟನ್ ಸರೋವರದಲ್ಲಿ ವಿಸರ್ಜಿಸಲಾಯಿತು.

ಫ್ರೆಂಡ್ಸ್ ಆಫ್ ಇಂಡಿಯ ಸಂಸ್ಥೆಯ ವತಿಯಿಂದ ನಡೆಯುವ ಮೇರು ಉತ್ಸವವಾದ ಗಣೆಶೋತ್ಸವವು ವ್ಯಕ್ತಿ ಕೇಂದ್ರಿತದಿಂದ ಕುಟುಂಬಕ್ಕೆ, ಕುಟುಂಬದಿಂದ ರಸ್ತೆಗೆ, ರಸ್ತೆಯಿಂದ ಸಮುದಾಯಕ್ಕೆ, ಸಮುದಾಯದಿಂದ ಇಂದಿನ ಇಲ್ಲಿನ ನಮ್ಮ ಪರಂಪರೆಯ ಕೇಂದ್ರಿತವಾಗಿ, ಸಂಸ್ಥೆಯಾಗಿ ಮಾತ್ರಲ್ಲದೇ ಸ್ವಯಂ ಸೇವಕರಿಂದಲೇ, ಜೀವನವನ್ನು ಸಂಭ್ರಮಿಸಲು ಶಾಂತಿ ಮತ್ತು ಸಾಮರಸ್ಯ ಸಂದೇಶವನ್ನು ಹರಡುತ್ತಾ ನಮಗೆ ವರವಾಗಿ ಬಂದ ಎಲ್ಲವನ್ನೂ ಆನಂದಿಸುತ್ತಾ, ಬೆಳೆಯುತ್ತಾ ಮುಂದುವರೆದಿದೆ. ಗಣೇಶೋತ್ಸವವನ್ನು ಸಾಧನವಾಗಿಸಿಕೊಂಡು ಎಫ್.ಓ.ಐ. ಸಂಸ್ಥೆಯು ಮನುಕುಲದ ಒಳಿತಿಗಾಗಿ ನಾವೆಲ್ಲ ನಮ್ಮ ಧರ್ಮಾಚರಣೆಗಳನ್ನು ಅರ್ಥೈಸಿಕೊಂಡು ಮತ್ತು ಆಚರಿಸುತ್ತಾ, ವಿಶ್ವ ಭಾತೃತ್ವದ ಪರಿಸರವನ್ನು ಸೃಷ್ಟಿಸುವೆಡೆಗೆ ಪಯಣಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ▪

ಗಣೇಶೋತ್ಸವದ ಮತ್ತಷ್ಟು ಛಾಯಾ ಚಿತ್ರಗಳು ಮುಂದಿನ ಪುಟದಲ್ಲಿ

Ganeshotsava Sydney 2016
©Photography by Prasad Hebbar

Ganeshotsava Sydney 2016
©Photography by Prasad Hebbar

Ganeshotsava Sydney 2016
SUDHAIVA
KUTUMBAK
©Photography by Prasad Hebbar

Ganeshotsava Sydney 2016
©Photography by Prasad Hebbar

Ganeshotsava Sydney 2016
©Photography by Prasad Hebbar

Ganeshotsava Sydney 2016
©Photography by Prasad Hebbar

Ganeshotsava Sydney 2016
GANESHOTSAVA
2016
©Photography by Prasad Hebbar

Ganeshotsava Sydney 2016
©Photography by Prasad Hebbar



ಜೀವ ಜಡರೂಪ ಪ್ರಪಂಚವನದಾವುದೋ |
ಆವರಿಸಿಕೊಂಡುಮೊಳನೆರೆದುಮಿಹುದಂತೆ ||
ಭಾವಕೊಳಪಡದಂತೆ ಅಳತೆಗಳವಡದಂತೆ |
ಆ ವಿಶೇಷಕೆ ಮಣಿಯೋ-ಮಂಕುತಿಮ್ಮ ||

ಪ್ರಪಂಚವನದಾವುದೋ=ಪ್ರಪಂಚವನ್+ಅದು+ಆವುದೋ,
ಆವರಿಸಿಕೊಂಡುಮೊಳನೆರೆದುಮಿಹುದಂತೆ=ಆವರಿಸಿಕೊಂಡುಂ+ಒಳನೆರದುಂ+ಇಹುದಂತೆ, ಭಾವಕೊಳಪಡದಂತೆ=ಭಾವಕೆ+ಒಳಪಡದಂತೆ,
ಅಳತೆಗಳವಡದಂತೆ=ಅಳತೆಗೆ+ಅಳವಡದಂತೆ.

ಜೀವ=ಚೇತನ, ಜಡ=ಸ್ಥಾವರ ಅಥವಾ ಚಲನೆಯಿಲ್ಲದ್ದು, ಒಳನೆರದು=ಒಳಗೆಲ್ಲಾ ಆವರಿಸಿಕೊಂಡು, ಅಳವಡದಂತೆ=ಅಳತೆಗೆ ಸಿಗದಂತೆ.
ಈ ಪ್ರಪಂಚದಲ್ಲಿ ಇರುವುದು ಎರಡೇ. ಒಂದು ಜಡ ಮತ್ತು ಮತ್ತೊಂದು ಜೀವ. ಜಡವೆಂದರೆ ಚೇತನವಿಲ್ಲದ್ದು. ಜೀವವೆಂದರೆ ಚೇತನ, ಇವೆರಡರ ಸಮ್ಮಿಲನವೇ ಜಗದ್ವ್ಯಾಪಾರ, ಇವೆರಡರಲ್ಲೂ ಆವರಿಸಿಕೊಂಡಿರುವ, ಭಾವದಿಂದ ಊಹಿಸಲಸಾಧ್ಯವಾದ, ಅಳತೆಗೆ ಸಿಗದ ವ್ಯಾಪಕತ್ವವು ಹೊಂದಿರುವ ಆ ವಿಶೇಷಕೆ, ಪರಮಾತ್ಮನಿಗೆ ನಮಿಸೋ, ಮಣಿಯೋ, ನಮಸ್ಕರಿಸೋ ಮಂಕುತಿಮ್ಮ ಎಂದು ಹೇಳುತ್ತಾರೆ ಡಿ.ವಿ.ಜಿ.

ಈ ಪರಮಾತ್ಮ-ಜಡ-ಜೀವ ಪರಸ್ಪರ ಸಂಬಂಧವನ್ನು ಕುರಿತು ಹೇರಳವಾದ ವ್ಯಾಖ್ಯಾನಗಳಿದ್ದರೂ "ಇದೇ-ಇದು" ಎಂದು ಹೇಳುವುದು ಅಸಾಧ್ಯ. ಅದು ಅನುಭವ ವೇದ್ಯ. ತೆಲುಗಿನ ಭಕ್ತಿಮಾರ್ಗದ ಮಹಾನ್ ಕವಿ ಅನ್ನಮಾಚಾರ್ಯರು-"ಅಂದರಿಲೋ ಪುಟ್ಟಿ ಅಂದರಿಲೋ ಚೇರಿ ಅಂದರಿ ರೂಪಮುಲು ಆಟು ತಾನೈ" ಎಂದು ಹೇಳುತ್ತಾರೆ. ಅಂದರೆ "ಎಲ್ಲರಲ್ಲೂ ಹುಟ್ಟಿ ಎಲ್ಲರಲ್ಲೂ ಸೇರಿ ಎಲ್ಲರ ರೂಪವು ತಾನೇ ಆಗಿ" ಎಂದು ಆ ಪರಮಾತ್ಮನನ್ನು ವರ್ಣಿಸುತ್ತಾರೆ. ಇಲ್ಲಿ ನಮಗೆ ಆ ಪರಮ ಪುರುಷನು ಇಡೀ ಜಗತ್ತು ಮತ್ತು ಅದರಲ್ಲಿರುವ ಸಕಲವೂ ಆಗಿ ತಾನೇ ಪ್ರಕಟಗೊಂಡಿದ್ದಾನೆ ಎಂದು ಅರ್ಥ ಬರುತ್ತದೆ. ಇರಲಿ ನಾವೂ ಸಹ ಇದನ್ನು ನಮ್ಮ ನಮ್ಮ ಮತಿಯ ಮಿತಿಯಲ್ಲಿ ವಿಚಾರದ ಓರಗೆ ಹಚ್ಚಿ ನಮ್ಮ ನಮ್ಮ ವಿಚಾರದ ಪರಿಧಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಪಡಬೇಕು.

ಮಹಾಭಾರತ ಯುದ್ಧದ ಸಮಯದಲ್ಲಿ, ಭೀಷ್ಮ ಪಿತಾಮಹರು ಶರ ಶಯ್ಯೆಯ ಮೇಲೆ ಮಲಗಿರುವಾಗ, ಒಂದು ದಿನ ಸತ್ಸಂಗದಲ್ಲಿ ಯುಧಿಷ್ಠಿರನು ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತಾ, "ಯತಃ ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೆ | ಯಸ್ಮಿಂಶ್ಚ ಪ್ರಳಯಂ ಯಾಂತಿ ಪುನರೇವ ಯುಗಕ್ಷಯೇ." ಎಂದು ಪರಮಾತ್ಮ ಸ್ವರೂಪವನ್ನು ವಿವರಿಸುತ್ತಾ "ಯುಗದ ಆದಿಯಲ್ಲಿ ಯಾರಿಂದ ಎಲ್ಲವೂ ಪ್ರಕಟಗೊಳ್ಳುತ್ತದೋ ಮತ್ತು ಯುಗದ ಅಂತ್ಯದಲ್ಲಿ ಯಾರಲ್ಲಿ ಎಲ್ಲವೂ ವಿಲೀನವಾಗುತ್ತದೋ, ಅದೇ ಪರಮಾತ್ಮ" ಎನ್ನುತ್ತಾರೆ.

ಆದರೆ ಎಂತೆಂತಹ ಮಹಾಮಹಿಮಾನ್ವಿತರಿಗೂ ಊಹಿಸಲು, ಅಳೆಯಲು ಮತ್ತು ತಿಳಿಯಲು ಕಷ್ಟಸಾಧ್ಯವಾದ ಆ ಪರಮಾತ್ಮನನ್ನು, "ವಿಚಿತ್ರ" "ವಿಶೇಷ"ಎಂದು ಕರೆದು, ಅದಕ್ಕೆ ನಮಿಸು, ಮಣಿ ಎಂದು ಆದೇಶಿಸುತ್ತಾರೆ ಮಾನ್ಯ ಡಿ.ವಿ.ಗುಂಡಪ್ಪನವರು. ▪

MOVIE NOT TO BE MISSED. A SUSPENSE, THRILLER, WITH UNEXPECTED TURNS LIKE RANGITHARANGA, ATAGARA....

EVENTS
CINEMAS
LIVERPOOL

13th NOV 2016

03:00 PM

Tickets
$15
Adults at Kids price

Book your seats by text msg (seats allotted on 1st come 1st serve basis, book asap)
Narayana – 0423634979 Nagabhushan – 0433 763 911 Arun - 0431 796 344

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.

Contact Mr Umesh EMAIL
Mobile 0401 034 456

AUSTINDIA SANGAM TRANSPORT

Contact Mr Eranna Gotyal EMAIL
Mobile 0404 215 605

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ದೀವಳಿಗೆ ಎಂಬ ಹೋಳಿಗೆ

ಹೋದ ವರ್ಷ ಬಂದ ಹಬ್ಬ ಹೋದ ವರುಷ ಹೊಳೆದ ಬೆಳಕು
ಮತ್ತೆ ಮರಳಿ ಬಂದಿತಿಂದು ಮತ್ತೆ ಮರಳಿ ಹೊಳೆಯಿತು

ರಾಜಶೇಖರ ಭೂಸನೂರಮಠರ ಈ ಗೀತೆ ಕಾಳಿಂಗರಾಯರ ಕಂಠದಲ್ಲಿ ಮೊಳಗಿದಾಗಲೆಲ್ಲ ದೀಪಾವಳಿಯೇ. ದೀಪಗಳ ಆವಳಿಯ ಆ ಕಾಲದಿಂದ ಶಬ್ದಗಳ ಹಾವಳಿಯ ಈ ದಿನದವರೆಗೆ ಎಷ್ಟು ದೀಪೋತ್ಸವಗಳೋ, ಎಷ್ಟು ದಿವ್ಯೋತ್ಸವಗಳೋ! **ಕುಂಬಾರನ ಹಣತೆಯಲ್ಲಿ ಗಾಣಿಗರ ಎಣ್ಣೆ ಹಾಕಿ, ಒಕ್ಕಲಿಗರ ಹತ್ತಿಯ ಬತ್ತಿಯನ್ನಿಟ್ಟು, ಬಡಗಿ ಕೊಯ್ದಿಟ್ಟ ಸಿಬಿರಿಗೆ ಕಿಡಿ ತಾಗಿಸಿ ಹೊತ್ತಿಸಿದರೆ ಕುಲಗೆಟ್ಟ ಬೆಳಕು ನೋಡಾ** ಎನ್ನುತ್ತಾರೆ ಕವಿ ಜರಗನಹಳ್ಳಿ ಶಿವಶಂಕರ್. ಯಾವ ಕುಲ, ಯಾವ ಮತದವರು ಹಚ್ಚಿದರೂ ಢಂ ಎನ್ನುವ, ಹೊತ್ತಿಸಿದರೂ ಸುರುಸುರು ಉರಿಯುವ ಜಾತ್ಯತೀತತೆ ಪಟಾಕಿಗಳದು!

ದೀಪಾವಳಿಯ ಸಂಭ್ರಮವೇ ಸಂಭ್ರಮ. ಢಂ ಎಂದರೆ ಹೆದರುವ ಹೆಂಗಳೆಯರ ಮುಂದೆ ಕೈಯಲ್ಲಿ ಪಟಾಕಿ ಅಂಟಿಸಿ ಎಸೆಯುವ ಪೋರನ ಸಂಭ್ರಮ; ಚಿಕ್ಕಮಕ್ಕಳ ಹೊಸ ಬಟ್ಟೆ ತೊಟ್ಟು ನಲಿಯುವ ಉತ್ಸಾಹ; ಮಾರವಾಡಿಗಳ ಹೊಸವರ್ಷದ ಸಡಗರದ ಮಧ್ಯೆ ಬೊಗಸೆಗಟ್ಟಲೆ ಗೋಡಂಬಿ, ಬಾದಾಮಿ ಮೆಲ್ಲುವ ಆಗಂತುಕರ ಸಂಭ್ರಮ; ಇವೆಲ್ಲವುಗಳ ಮಧ್ಯೆ ಆಗತಾನೇ ಫ್ರೆಶ್ಶಾಗಿ ಪ್ರಿಯತಮೆ ಕೈಕೊಟ್ಟುದನ್ನು ನೆನಪಿಸಿಕೊಳ್ಳುತ್ತಾ ***ಏಕ್ ವೋ ಭೀ ದಿವಾಲೀ ಥೀ; ಏಕ್ ಏ ಭೀ ದಿವಾಲೀ ಹೈ; ಉಧುಡಾ ಹುವಾ ಗುಲಶನ್ ಹೈ; ರೋತಾ ಹುವಾ ಮಾಲೀ ಹೈ*** ಎನ್ನುವ ಮುಕೇಶನ ಹಾಡು ಗುನುಗುವುದರ ಮೂಲಕ ಮೂಕರೋದನ.

ದೀಪಾವಳಿಯ ಉತ್ಸಾಹವನ್ನು ಕವಿ ನರಸಿಂಹಸ್ವಾಮಿಗಳ ಮಾತಿನಲ್ಲೇ ಕೇಳಬೇಕು.

ಹೂವು ಬಳ್ಳಿಗೆ ದೀಪ; ಹಸಿರು ಬಯಲಿಗೆ ದೀಪ
ಹುಲಿಯ ಕಣ್ಣಿನ ದೀಪ ಕಾಡಿನಲ್ಲಿ;
ಮುತ್ತು ಕಡಲಿಗೆ ದೀಪ; ಹಕ್ಕಿ ಗಾಳಿಗೆ ದೀಪ;
ಗ್ರಹತಾರೆಗಳ ದೀಪ ಬಾನಿನಲ್ಲಿ

ಎನ್ನುತ್ತಾ ನಿಸರ್ಗದ ನಿತ್ಯ ದೀಪಾವಳಿಯ ಚಿತ್ರಣ ನೀಡುವ ಆ ಲಲಿತಮಯ ಕವಿ ಬದುಕಿನ ದೀಪಾವಳಿಯನ್ನೂ ವರ್ಣಿಸುತ್ತಾ

ಬಲ್ಮೆ ತೋಳಿಗೆ ದೀಪ; ದುಡಿಮೆ ಬೆವರಿನ ದೀಪ;
ಸಹನೆ ಅನುಭವ ದೀಪ ಬದುಕಿನಲ್ಲಿ;
ಮುನಿಸು ಒಲವಿಗೆ ದೀಪ; ಉಣಿಡು ಒಡಲಿಗೆ ದೀಪ;
ಕರುಣೆ ನಂದಾದೀಪ ಲೋಕದಲ್ಲಿ

ಎನ್ನುತ್ತಾ ಗಂಡ-ಹೆಂಡಿರ ಮುನಿಸಿನಲ್ಲೇ ಒಲವಿನ ಛವಿ ಕಂಗೊಳಿಸುವುದು, ದುಡಿಮೆಯ ಬೆವರಲ್ಲಿ ಜೀವನದ ಪಥಕ್ಕೆ ಪಾರ್ಶ್ವದೀಪಗಳು ಬೆಳಗುವುದನ್ನು ನುಡಿಮಾಲೆಯಲ್ಲಿ ನೀಡಿದ್ದಾರೆ. ಮಾಮರದ ಚಿಗುರಲ್ಲಿ, ಮಾವನ ಮಗಳ ಚಿಗುರಬೆರಳೊಡನೆ ಆಡುತ್ತಾ, ತೋರಣವ ಕಟ್ಟುವ ಸೊಬಗು; ಆ ಕೋಮಲ ಕದಪುಗಳಲ್ಲಿನ ಲಜ್ಜೆಭರಿತ ರಂಗು, ಹೆಜ್ಜೆಗಳಲ್ಲಿ ಸ್ಪ್ರಿಂಗಿನಂತೆ ಪುಟಿಪುಟಿಯುವ ಲಾಲಿತ್ಯ, ಎಲ್ಲವೂ ಒಂದು ಕನಸಿನ ಲೋಕದ ಮುನ್ನುಡಿಯಂತಿರುತ್ತಿದ್ದವು.

ತೋರಣದ ತಳಿರಲ್ಲಿ; ಹೊಸಿಲ ಹಣತೆಗಳಲ್ಲಿ
ಬಾಣಬಿರುಸುಗಳಲ್ಲಿ ನಲಿವು ಮೂಡಿ;
ಕತ್ತಲೆಯ ಪುಟಗಳಲಿ; ಬೆಳಕಿನಕ್ಷರಗಳಲಿ
ದೀಪಗಳ ಸಂದೇಶ ಥಳಥಳಿಸಲಿ

ಎಂದರು ಕವಿಗಳು. ಈಗಾದರೆ

ಪ್ಲಾಸ್ಟಿಕ್ಕ ಹಸಿರಲ್ಲಿ; ಸೀರಿಯಲ್ ಸೆಟ್ಟಿನಲಿ
ಟಿವಿ ಕಂಪ್ಯೂಟರ್ಗಳಲಿ ಒಲವು ಮೂಡಿ
ವಾಟ್ಸಪ್ನ ಪೇಜಿನಲಿ; ಫೇಸ್ಬುಕ್ನ ಟ್ಯಾಗಿನಲಿ
ದಿವಾಳಿ ಪೋಸ್ಟುಗಳು ಮೂಡುತಿರಲಿ

ಎನ್ನಬೇಕಾಗಿತ್ತೇನೋ.

ಮುಂದಿನ ಪುಟ ನೋಡಿ ...

ದೀಪಾವಳಿಗೆ ಮುನ್ನುಡಿಯಾದ ನೀರು ತುಂಬುವ ಹಬ್ಬ ಅಂದಿಗೆ ಸೊಗಸು. ಈ ವರ್ಷವಂತೂ ನೀರು ತುಂಬುವ ಹಬ್ಬವನ್ನು ಕೇವಲ ಮೆಟ್ಟೂರು ಡ್ಯಾಮ್ ಮಾತ್ರ ಮಾಡಬಹುದು!

ಹೋದ ವರ್ಷ 'ನಾಳೆ ನೀರು ತುಂಬುವ ಹಬ್ಬ' ಎಂದು ನೆರೆಮನೆಯವರು ಹೇಳಿದಾಗ ನನ್ನಾಕೆ 'ಬೆಂಗಳೂರಿಗೆ ಬಂದಾಗಿನಿಂದ ವಾರಕ್ಕೆ ಮೂರು ದಿನ ನೀರು ತುಂಬುವ ಹಬ್ಬವೇ' ಎಂದುದಲ್ಲದೆ 'ನಮ್ಮ ಮನೆಯವರಿಗೆ ಎಣ್ಣೆ ಇಟ್ಟುಕೊಂಡರೆ ಶೀತ; ಸೀಗೆಪುಡಿ ಹತ್ತಿರ ತಂದರೆ ಸೀನು. ನಿಮ್ಮ ಮನೆಯಲ್ಲಿ ಹೇಗೆ?' ಎಂದಳು. 'ನಮ್ಮ ಮನೆಯಲ್ಲಿ ಪ್ರತಿರಾತ್ರಿ ಎಣ್ಣೆನೀರು. ಯಜಮಾನರು ಎಣ್ಣೆ ಹಾಕಿಕೊಂಡು ಬರುತ್ತಾರೆ. ನಾನು ನೀರು ಸುರಿದು ಒಳಗೆ ಕರೆದುಕೊಳ್ಳುತ್ತೇನೆ. ಆಯಿತಲ್ಲ ಎಣ್ಣೆ-ನೀರು' ಎಂದಿದ್ದರು.

ನೀರು ತುಂಬುವ ಹಬ್ಬದ ಮರುದಿನದ ಸಡಗರ ನೀರು ಹಾಕಿಕೊಳ್ಳುವುದು. ಹಂಡೆಯ ಸುತ್ತ ರಂಗೋಲೆ ಹಾಕಿ, ಹಂಡೆ ಭರ್ತಿ ನೀರು ತುಂಬಿಸಿ, ಹೆಂಗಳೆಯರು ಗಂಡ, ಮಕ್ಕಳಿಗೆ ಅಭ್ಯಂಜನ ಸ್ನಾನ ಮಾಡಿಸುವುದನ್ನು ವೈ.ವಿ. ಗುಂಡೂರಾವ್ ಹಾಡುವ, ಎಸ್. ಮಂಜುನಾಥ್ ವಿರಚಿತ ಅಣಕವಾಡು ನೀಡುವ ಚಿತ್ರಣವೇ ಚಂದ

ಹಂಡೆ ಕರಿಯ ಹಂಡೆ
ಮುತ್ತಾತ ತನ್ನ ಮದುವೇಲಿ ಪಡೆದ ಮಣಭಾರದ
ಭವ್ಯ ಒಡಲ ಬಹಳ ಹಳೆಯ ಹಂಡೆ ಕರಿಯ ಹಂಡೆ ॥

ಮಿಂದು ಬೆಳೆದವು ಮಕ್ಕು ಮರಿಗಳು
ಸರಿದುಹೋದವು ವರ್ಷಾಂತರಗಳು
ದುಷ್ಕಾಲ ಬಂತಲ್ಲ ಕೊಳ್ಳಲು ಸಾಧ್ಯವೆ ಇನ್ನು ಇಂತಹ
ಹಂಡೆ ಕರಿಯ ಹಂಡೆ ॥

ಈ ಹಂಡೆ ತುಂಬ ನೀರನ್ನು ಕಾಯಿಸಿ
ಮನೆಯವರ್ಗೆಲ್ಲ ಎಣ್ಣೆಯ ಲೇಪಿಸಿ
ಮನಸಾರೆ ನೀರನು ಎರೆಯುವ ನೀರೆಯ
ಕೈಯ ಬಳೆಗಳ ನಾದದ ಇಂಪು ಪ್ರೀತಿ ಪ್ರೇಮಗಳು ಬೆಸೆದಿಹ ಸೊಂಪು
ಮಂದಹಾಸ ಮುಖ ತೃಪ್ತಿ ತಂದ ಸುಖ ಅಂದಿನ ಸರಸ ಸೌಖ್ಯಕೆ ಸಾಕ್ಷಿ
ಹಂಡೆ ಕರಿಯ ಹಂಡೆ ॥

ಮೂವತ್ತು ಕೊಡ ನೀರು ಹಿಡಿಯುವಾ ಹಂಡೆ
ಮಸಿಗಟ್ಟಿ ಕಪ್ಪಾದ ತಾಮ್ರದಾ ಹಂಡೆ
ಬಳಸಲು ಯೋಗ್ಯತೆ ನಾವ್ ಪಡೆದಿಲ್ಲ
ಲೀಟರ್ ಲೆಕ್ಕದ ನೀರಿನ ಬಿಲ್ಲಿನ ಸಂಸ್ಕಾರಕು ಸೌದೆ ಇಲ್ಲದ ಕಾಲ
ಅದಕೆ ನಾವಿಂದು ಬಾಯ್ಲರ್ ಬಳಸೆ ಮೂಲೆ ಹಿಡಿದು ಕೂತಿದೆ ನಮ್ಮ
ಹಂಡೆ ಕರಿಯ ಹಂಡೆ ॥

ಎಂಬ ಗೀತೆ ಅಭ್ಯಂಜನದ ಅಂಗಳಕ್ಕೆ ಸರ್ವದಾ ಸೂಕ್ತ. ನರಕಾಸುರನ ವಧೆ ಮಾಡಿ, ಹದಿನಾರು ಸಾವಿರ ಸ್ತ್ರೀಯರಿಗೆ ವಿಮೋಚನೆ ನೀಡಿದ ಕಾರಣ ಶ್ರೀಕೃಷ್ಣನನ್ನು ಅವರ ಪತಿ ಎಂದರೆ ಕಾಪಾಡಿದವನು ಎಂದರ್ಥದಲ್ಲಿ ನುಡಿದದ್ದನ್ನು ನಮಗೆ ತಕ್ಕಂತೆ ಅರ್ಥೈಸಿಕೊಂಡು 'ಸಿಕ್ಸ್‌ಟೀನ್ ಥೌಸಂಡ್ ಹೆಂಡತಿಯರು. ನಾನೂ ಆಗಬಹುದೆ?' ಎಂದ ನನ್ನ ಗೆಳೆಯ. 'ಖಂಡಿತ. ಮೊದಲು ಏಳುಹೆಡೆಯ ಸರ್ಪವನ್ನು ಮಟ್ಟ ಹಾಕು; ಕಿರುಬೆರಳಿನಲ್ಲಿ ಬೆಟ್ಟ ಎತ್ತು; ಅತ್ಯಾಚಾರವಾಗುತ್ತಿರುವ ಹೆಣ್ಣಿಗೆ ವಸ್ತ್ರವನ್ನಿತ್ತು ಕಾಪಾಡು. ನಂತರ ಹದಿನಾರೇನು, ಇಪ್ಪತ್ತುಸಾವಿರ ಸ್ತ್ರೀಯರನ್ನು ಬೇಕಾದರೂ ವರಿಸು' ಎಂದೆ. ಮಹಾಭಾರತದಲ್ಲಿ ಎರಡು ಸುಳ್ಳುಗಳಿವೆ ಎಂದರೊಬ್ಬ ಅಸಹಿಷ್ಣುತೆ ಸಂಘದ ಕಾರ್ಯದರ್ಶಿ. 'ಗಾಂಧಾರಿಯ ಶಾಪಕ್ಕೆ ಅನುಗುಣವಾಗಿ ಇಡೀ ಯಾದವಕುಲ ನಾಶವಾಯಿತು' ಎಂಬುದು ಸುಳ್ಳು ಎನ್ನಲು ಇಂದಿಗೂ ಲಲ್ಲೂ, ಮುಲಾಯಮ್, ಶರದ್ ಯಾದವರು ಇದ್ದಾರೆ ಎಂದರು ಆ ಬುದ್ಧಿಜೀವಿ. ಯಾದವರ ಬಗ್ಗೆಯೇ ಬರೆಯುತ್ತಾ ಕವಿ ಡುಂಡಿರಾಜ್ 'ಅವರು ಯಾದವರು; ನಾವೂ ಅಷ್ಟೇ; ಮದುವೆ-ಯಾದವರು' ಎಂದಿದ್ದಾರೆ.

ಮುಂದಿನ ಪುಟ ನೋಡಿ ...

‘ಮಹಾಭಾರತದ ಮತ್ತೊಂದು ಸುಳ್ಳೆಂದರೆ ಅಂಧಕಾಸುರನ ವಧೆ ಆಯಿತು ಎನ್ನುವುದು’ ಎಂದರವರು. ಒಂದು ವಿಧದಲ್ಲಿ ಸರಿಯೇ. ಕರ್ನಾಟಕ ಸರ್ಕಾರ ಇರುವವರೆಗೆ ನಗರಗಳಲ್ಲಿ ಪ್ರತಿ ದಿನಕ್ಕೆ ಕನಿಷ್ಠ ಎರಡು ಗಂಟೆಗಳವರೆಗೆ ಮತ್ತು ಹಳ್ಳಿಗಳಲ್ಲಿ ಎಂಟರಿಂದ ಹತ್ತು ಗಂಟೆಗಳವರೆಗೆ ಅಂಧಕಾಸುರ ದಿನವೂ ಜನ್ಮ ತಾಳುತ್ತಲೇ ಇರುತ್ತಾನೆ. ಇರಲಿ. ಅವರು ಏನು ಹೇಳಿದರೋ, ನಾವು ಏನು ಅರ್ಥ ಮಾಡಿಕೊಂಡೆವೋ... ಕೆ.ಎಸ್.ನ. ದೀಪದ ಬಗ್ಗೆಯೂ ಬರೆಯುತ್ತಾ ‘ದೀಪವು ನಿನ್ನದೆ ಗಾಳಿಯು ನಿನ್ನದೆ ಆರದಿರಲಿ ಬೆಳಕು’ ಎನ್ನುತ್ತಾರೆ. ಒಂದು ವಿಧದಲ್ಲಿ ಇಂದಿಗೂ ಆ ಹಾಡು ಪ್ರಸ್ತುತ. ಕೊಂಚ ಲಿರಿಕ್ಸ್ ಚೇಂಜ್ ಆಗಬೇಕಷ್ಟೆ.

ದೀಪವು ನಿನ್ನದೆ ಗಾಳಿಯು ನಿನ್ನದೆ; ಆಡದಿರಲಿ ವೈರೂ...
ಮಳೆಯೂ ನಿನ್ನದೆ ಕರೆಂಟೂ ನಿನ್ನದೆ ಹೋಗದಿರಲಿ ಲೈಟೂ... ||

ಸ್ವಿಚ್ಚೂ ನಿನ್ನದೆ ಗ್ರಿಡ್ಡೂ ನಿನ್ನದೆ ನಮ್ಮೊಳಿರಲಿ ಪ್ರೀತಿ
ಮಿಕ್ಸಿ ಗ್ರೈಂಡರ್ ಎಲ್ಲವು ನಿಂತಿವೆ ಬರಲಿ ವಿದ್ಯುತ್ ಕಾಂತಿ ||

ಆಗೊಂದು ಕಡಿತ ಈಗೊಂದು ಕಡಿತ ಇಲಾಖೆಗಲಂಕಾರ
ಅಲ್ಲೊಂದು ಹಕ್ಕಿ ಢಂ ಟ್ರಾನ್ಸ್‌ಫಾರ್ಮರ್ ನಿನಗೆ ನಮಸ್ಕಾರ
ಮಳೆಯೂ ನಿನ್ನದೆ ಕರೆಂಟೂ ನಿನ್ನದೆ ಹೋಗದಿರಲಿ ಲೈಟೂ... ||

ಎಂದು ಪರಿಪರಿಯಾಗಿ ಇಲಾಖೆಯನ್ನು ಬೇಡಿ, ಲೈನ್‌ಮನ್‌ಗೆ ಶಾಖಾಯ ಲವಣಾಯ ಇತ್ತರೆ ಇಂದಿನ ದೀಪಾವಳಿಗೆ ದೀಪ; ಇಲ್ಲವಾದರೆ? ಇಗೋ ಇದೊಂದು ಪುಟ್ಟಕವನ;

ಅಂದು ಕೆಂಪೇಗೌಡರ ಕಾಲ; ಎಲ್ಲೆಲ್ಲು ಹಸಿರು; ಹೂಗಳು ಕೆಂಪುಕೆಂಪು
ಇಂದು ಸದಾನಂದಗೌಡರ ಕಾಲ; ಮಾಲಿನ್ಯದುಸಿರು; ಕಂಗಳು ಕೆಂಪುಕೆಂಪು
ಆದರೂ ಅಂದಿಗೂ ಇಂದಿಗೂ ಎಂತಹ ಸಾಮ್ಯ
ಅಂದಿಗೂ ಮಿಣುಕುದೀಪ; ಇಂದಿಗೂ ಮಿಣುಕುದೀಪ.

ಈಗ ಒಂದು ತೊಗೊಂಡ್ರೆ ಇನ್ನೊಂದುಚಿತ ಎನ್ನುವ ದಿನಗಳಾದ್ದರಿಂದ ‘ಲೈಟ್ ತೊಗೊಂಡ್ರೆ ಸೌಂಡ್ ಫ್ರೀ’ ಎನ್ನುತ್ತಾ ಅಪಾರ ಶಬ್ದವನ್ನು ಮಾಡುವ ಪಟಾಕಿಗಳ ಹಾವಳಿ. ಅಂದಿಗೆ ಹಿತಮಿತವಾಗಿದ್ದು, ಬೆಳಕಿನಲ್ಲಿ ಸದ್ದಿನ ಪಟಾಕಿ, ಇರುಳಿನಲ್ಲಿ ಬೆಳಕು ಬೀರುವ ಮದ್ದುಗಳನ್ನು ಹೊತ್ತಿಸುವಿಕೆ ಇದ್ದಿತು. ಈಗ, ಬಡಪಾಯಿ ಸಾಫ್ಟ್‌ವೇರ್ ಮಂದಿ ಮತ್ತು ಖಾಸಗಿ ನೌಕರರು ಅಂದೂ ಕೆಲಸ ಮುಗಿಸಿ ಮನೆಗೆ ಬರುವಾಗಲೇ ಇರುಳಾಗುವುದರಿಂದ ಒಟ್ಟೊಟ್ಟಿಗೇ ಸೌಂಡ್ & ಲೈಟ್ ಎಫೆಕ್ಟ್. ಎಲ್ಲೆಡೆಯೂ ಒಂದೇ ಬಾರಿ ಸದ್ದು ಮೊಳಗುವುದರಿಂದ ಸರೌಂಡ್ ಸೌಂಡ್ ಎಫೆಕ್ಟ್. ಆದರೂ...

ಪಕ್ಕದ ಮನೆಯಲ್ಲಿ ಹಬ್ಬಕ್ಕೆಂದು ಊರಿನಿಂದ ಪತಿಯ ಅತ್ತೆ, ಇಬ್ಬರು ನಾದಿನಿಯರು, ಅತ್ತೆಯ ತಂಗಿ ಬಂದಿಳಿದಿದ್ದರು. ಮಗಳೊಡನೆ ಪಟಾಕಿ ಹಚ್ಚುವಾಗಲೂ ಮಾತೋ ಮಾತು. ಆ ಮಾತಿನ ಭರಾಟೆಯಲ್ಲಿ ಪತಿ ಹಚ್ಚಿದ ಒಂದು ಪಟಾಕಿಯ ಸದ್ದಾದರೂ ಕೇಳಿಬರಲಿಲ್ಲ! ಮೇಲಿನ ಫ್ಲಾಟಿನಲ್ಲಿ ಒಬ್ಬರ ಮನೆಯಲ್ಲಂತೂ ಹಬ್ಬದ ವಾತಾವರಣವೇ ಇಲ್ಲ. ಏನಾಯಿತೆಂದು ಹೋಗಿ ‘ಪಟಾಕಿ ತರಲಿಲ್ಲವೇ?’ ಎಂದೆ.

ಅಮ್ಮ ಆನೆಪಟಾಕಿ ಅಪ್ಪ ಆಟಂಬಾಂಬು
ಚಿನಕುರುಳಿ ಹೂಕುಂಡ ಮಕ್ಕಳಾ ಗುಂಪು
ಅತ್ತೆ ಸುರುಸುರುಬತ್ತಿ ಮಾವ ದೀಪದ ಬುಡ್ಡಿ
ಮನೆಯೊಳಗೆ ದೀವಳಿಗೆ ಮಂಕುದಿಣ್ಣೆ

ಎಂದರವರು. ವರ್ಷವರ್ಷವೂ ಬರುವ ಲಕ್ಷ್ಮಿ ಪಟಾಕಿ, ಏರ್ಗನ್, ಇತ್ಯಾದಿಗಳಲ್ಲದೆ ಹೊಸ ಪಟಾಕಿಗಳು ಬಂದರೆ ಹೇಗೆ ಎಂದು ಯೋಚಿಸುತ್ತಿದ್ದೆ. ಇಂದಿನ ದಿನಗಳಿಗೆ ತಕ್ಕಂತೆ ಹಚ್ಚಿದ ತಕ್ಷಣ ‘ಢಂ’ ಎಂದೋ, ‘ಠುಸ್’ ಎಂದೋ ಅನ್ನುವುದರ ಬದಲು ‘ತಣ್ಣೀ ತಣ್ಣೀ’ ಎಂದೋ ‘ನೀರು ನೀರು’ ಎಂದೋ ಸದ್ದು ಮಾಡುವ ದಪ್ಪನೆಯ ಹೆಣ್ಣಿನ ಚಿತ್ರವಿರುವ ಪಟಾಕಿಯೊಂದು ಇಂದಿಗೆ ಮಂಡ್ಯದ ಸುತ್ತಮುತ್ತ ಬಹಳವೇ ಮಾರಾಟವಾಗುತ್ತಿತ್ತು. ಅಂತೆಯೇ ‘ಭಾಗ್ಯ ಬ್ಯಾಂಡ್’ ಪಟಾಕಿಗಳನ್ನು ಈ ವರ್ಷ ಪರಿಚಯಿಸಬಹುದಿತ್ತು. ಕಿಡಿ ಹಚ್ಚಿದ ತಕ್ಷಣ ಒಮ್ಮೆ ‘ಕಮಲ’, ಒಮ್ಮೆ ‘ಸಂಗೊಳ್ಳಿ’ ಎನ್ನುವ ಡಬಲ್ ಸೌಂಡ್ ಪಟಾಕಿಯನ್ನು ಕಂಡುಹಿಡಿದಿದ್ದರೆ ಶಿವಮೊಗ್ಗದ ಸುತ್ತಮುತ್ತ ಬಹಳವೇ ಬೇಡಿಕೆ ಇರುತ್ತಿತ್ತು. ಕಿಡಿ ಬಿದ್ದತಕ್ಷಣ ಹನ್ನೆರಡು ಹೋಳುಗಳಾಗಿ ‘ಜೈಲ್’ ಎಂದು ಬರೆದಿರುವ ಡಬ್ಬದತ್ತ ಸರಿದು ಸಿಡಿಯುವ ಎಎಪಿ ಬ್ಯಾಂಡ್ ಪಟಾಕಿಗಳನ್ನು ದೆಹಲಿಯ ಸುತ್ತಮುತ್ತ ಚೆನ್ನಾಗಿಯೇ ಮಾರಬಹುದಿತ್ತು. ಬುಸುಗುಟ್ಟುವ ಹಾವಿನಮಾತ್ರೆಗಳನ್ನು ಭಿನ್ನಮತ ಭುಗಿಲೆದ್ದಿರುವ ಒರಿಸ್ಸಾದಲ್ಲಿ ಹಂಚಬಹುದಿತ್ತು. ‘ನೀರು’ ಎಂದಾಕ್ಷಣ ಠುಸ್ ಎನ್ನುವ ಕೆಂಪುಕಟ್ಟಡದ ಚಿತ್ರವಿರುವ ಪಟಾಕಿಯೂ ಜನರ ಮೆಚ್ಚುಗೆ ಗಳಿಸುತ್ತಿತ್ತು.

ಮುಂದಿನ ಪುಟ ನೋಡಿ ...

ಆದರೆ ಈ ಯಾವ ಪಟಾಕಿಯನ್ನು ಹಚ್ಚುವಾಗಲೂ ಟಿವಿಯಲ್ಲಿ ಆರ್ನಬ್ ಗೋಸ್ವಾಮಿ ಬರದಂತೆ ನೋಡಿಕೊಳ್ಳುವುದು ಅಗತ್ಯವಾಗಿತ್ತು. ಆತನ ಪಟಪಟ ಮಾತಿನ ಮುಂದೆ ಪಟಾಕಿ ಮೌನಗೌರಿ

ಇಸ್ರೋದವರು ಒಟ್ಟೊಟ್ಟಿಗೆ ರಾಕೆಟ್‌ಗಳನ್ನು ಬಿಟ್ಟಿದ್ದರಿಂದ ಈ ವರ್ಷ ರಾಕೆಟ್ ಮಜವೆನಿಸುವುದಿಲ್ಲ. ಬದಲಿಗೆ 'ಪಾಕ್ ಮಾತು' ಎಂಬ ಹೊಸ ಪಟಾಕಿಯನ್ನು ತಯಾರಿಸಿದ್ದಿದ್ದರೆ ಫ್ಲವರ್ ಪಾಟ್‌ನಂತೆಯೇ ಚಿಮ್ಮುತ್ತಾ ಇದ್ದಕ್ಕಿದ್ದಂತೆ ಢಂ ಎನ್ನುವುದರ ಮೂಲಕ ನಿಬ್ಬೆರಗಾಗಿಸುತ್ತಿತ್ತು. ಎಲ್ಲೆಲ್ಲೋ, ಹೇಗೆಹೇಗೋ ಸಿಡಿದು ನೋಡಿಗರಲ್ಲಿ ನಗೆ ಉಕ್ಕಿಸುವ ರೀತಿಯ 'ರೌಲ್ ವಿನ್ಸಿ' ಪಟಾಕಿಯನ್ನೂ ಹೊರತರಬಹುದಿತ್ತು.

ಓಹ್! ಬ್ರೇಕಿಂಗ್ ನ್ಯೂಸ್ ಒಂದಿದೆ. ಪಾತಾಳದ ಬಲಿಚಕ್ರವರ್ತಿಯು 'ನೀವು ಕೇವಲ ಐದು ಅಡಿ ಎತ್ತರವಿದ್ದಾಗ ದಾನ ಕೇಳಿದಿರಿ. ಆ ಅಳತೆಗೆ ತಕ್ಕಂತೆ ಮೂರು ಹೆಜ್ಜೆ ಭೂಮಿ ತೆಗೆದುಕೊಳ್ಳುವ ಬದಲು ಪಾದ ಬೆಳೆಸಿ ಅಳತೆ ತೆಗೆದುಕೊಂಡಿರಿ. ಆದ್ದರಿಂದ ಐದು ಅಡಿ ಎತ್ತರದ ಮನುಷ್ಯನ ಪಾದದ ಅಳತೆಗೆ ಸರಿಯಾದ ಮೂರು ಹೆಜ್ಜೆಗಳನ್ನು ಮಾತ್ರ ತೆಗೆದುಕೊಂಡು ಮಿಕ್ಕ ಅಕ್ರಮ ಜಾಗವನ್ನು ವಾಪಸ್ ಮಾಡಿ' ಎಂದು ವಾಮನನಿಗೆ ನೋಟೀಸ್ ಜಾರಿ ಮಾಡಿದನಂತೆ.

ವಾಮನನ ಲಾಯರ್ 'ನೀವು ಬರೆದುಕೊಟ್ಟ ಪತ್ರದಲ್ಲಿ ಮೇಲೆ ಆಕಾಶ ಕೆಳಗೆ ಪಾತಾಳ ಇರುವ ಭೂಮಿ ಒಂದು ಹೆಜ್ಜೆ; ಕೆಳಗೆ ಶೂನ್ಯ, ಮೇಲೆ ಭೂಮಿ ಇರುವ ಪಾತಾಳ ಒಂದು ಹೆಜ್ಜೆ; ಮೇಲೆ ಶೂನ್ಯ, ಕೆಳಗೆ ಭೂಮಿ ಇರುವ ಆಕಾಶ ಒಂದು ಹೆಜ್ಜೆ ಎಂದು ಬರೆದುಕೊಟ್ಟಿದ್ದೀರಿ. ಚಕ್ಕುಬಂದಿಗಳ ಮಧ್ಯೆ ಇರುವ ಸಮಸ್ತವೂ ನಮಗೇ ಸೇರತಕ್ಕದ್ದು' ಎಂದು ಉತ್ತರ ನೀಡಿದ್ದಾರಂತೆ. ಕೇಸು ಮುಂದಿನ ದೀಪಾವಳಿಗೆ ಅಡ್ಜರ್ನ್ ಆಗಿದೆಯಂತೆ.
ಮುಗಿಸುವ ಮುನ್ನ ಮತ್ತೆ ನರಸಿಂಹಸ್ವಾಮಿಯವರ ಕವನದ ಸಾಲಿಗೆ ಮರಳೋಣ.

ಬೆಳಕಿನಸ್ತಿತ್ವವನೆ ಅಣಕಿಸುವ ಕತ್ತಲೆಗೆ
ತಕ್ಕ ಉತ್ತರವಿಲ್ಲಿ ಕೇಳಿಬರಲಿ;
ದೀಪಾವಳಿಯ ಜ್ಯೋತಿ ಅಭಯ ಹಸ್ತವನೆತ್ತಿ
ಎಲ್ಲರಿಗೆ ಎಲ್ಲಕ್ಕೆ ಶುಭಕೋರಲಿ. ▪



ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ವಿಚಾರ ವಿಹಾರ

ಮಾಲು, ಅಡಿಲೈಡ್

ಉದ್ಯೋಗಂ ಪುರುಷ ಲಕ್ಷಣಂ ಎಂಬುವ ಸುಭಾಷಿತದ ಸಾಲು ನಮಗೆಲ್ಲರಿಗೂ ಚಿರಪರಿಚಿತ. ಈ ಮೇಲಿನ ಸಾಲಿನ ಪೂರ್ಣ ಸುಭಾಷಿತ ಶ್ಲೋಕ ಹೀಗಿದೆ :

ಅಶ್ವಸ್ಯ ಲಕ್ಷಣಂ ವೇಗೋ ಮದೋ ಮಾತಂಗಲಕ್ಷಣಂ|
ಚಾತುರ್ಯಂ ಲಕ್ಷಣಂ ನಾರ್ಯ ಉದ್ಯೋಗಂ ಪುರುಷ ಲಕ್ಷಣಂ||

ಅಶ್ವಸ್ಯ ಲಕ್ಷಣಂ ವೇಗೋ. ಕುದುರೆಗೆ ವೇಗವಾಗಿ ಓಡುವುದೇ ಅದರ ಲಕ್ಷಣ. ಅದು ವೇಗವಾಗಿ ಓಡದಿದ್ದಲ್ಲಿ ಅದು ಕತ್ತೆಗೆ ಸಮನಾಗಿಬಿಡುತ್ತದೆ! ಓಡುವುದು ಕುದುರೆಯ ಬರೀ ಲಕ್ಷಣವಲ್ಲ ಅದು ಕುದುರೆಯ ವಿಶೇಷ ಲಕ್ಷಣ.

ಮದೋ ಮಾತಂಗ ಲಕ್ಷಣಂ. ಮಾತಂಗವೆಂದರೆ ಆನೆ. ಬೃಹತ್ ಆಗಿರುವ ಈ ಆನೆಯ ದೃಷ್ಟಿಯಲ್ಲಿಯೇ ಮದ ಎಂಬುವ ಗುಣ ಇದೆ. ಕಾಡಿನಲ್ಲಿ ರಾಜನಿಗೆ ಎದುರಿಸುವ ಶಕ್ತಿ ಗಜನಿಗಲ್ಲದೆ ಬೇರೆ ಯಾವ ಪ್ರಾಣಿಗುಂಟು! ಮದ ಆನೆಗೆ ವಿಶೇಷ ಲಕ್ಷಣ.

ಚಾತುರ್ಯಂ ಲಕ್ಷಣಂ ನಾರ್ಯ. ಚತುರತೆ ಸ್ತ್ರೀಗೆ ಇರುವ ಅತಿ ವಿಶೇಷ ಲಕ್ಷಣ. ಜೀವನದಲ್ಲಿ ಹಲವು ಪಾತ್ರಗಳನ್ನೂ ನಿರ್ವಹಿಸಿ ಮನೆಯನ್ನು ದಕ್ಷತೆಯಿಂದ ನಡೆಸಬೇಕಾದರೆ ಚಾಣಕ್ಷತೆ ಹೆಣ್ಣಿಗೆ ಬೇಕಾಗುತ್ತದೆ.

ಉದ್ಯೋಗಂ ಪುರುಷ ಲಕ್ಷಣಂ. ಪ್ರಕೃತಿ ಬಲಾಢ್ಯತೆಯನ್ನು ಗಂಡುಪ್ರಾಣಿಗೆ ವರವಾಗಿ ಕೊಟ್ಟಿದೆ. ಗಂಡಿನ ದೇಹದ ರಚನೆಯೇ ಹಾಗೆ, ಕರ್ಮವನ್ನು ಮಾಡುವುದಕ್ಕಾಗಿಯೇ ಗಂಡಸು ಬದುಕಿದ್ದಾನೇನೋ ಎನಿಸಿಬಿಟ್ಟರೆ ಆಶ್ಚರ್ಯವಿಲ್ಲ!

ಕುಟುಂಬದ ರಕ್ಷಣೆಗಾಗಿ ಗಂಡು ಕೆಲಸ ಮಾಡಲೇ ಬೇಕಾಗುತ್ತದೆ. ಪಾಲನೆ ಹೆಣ್ಣಿನ ಕರ್ತವ್ಯ ಮತ್ತು ಪೋಷಣೆ ಗಂಡಿನ ಕರ್ತವ್ಯ. ಇದು ಶತಃ ಸಿದ್ಧ.

ವೃತ್ತಿಯಿಂದ ನಿವೃತ್ತರಾದಮೇಲೆಯೂ ಗಂಡು ಏನಾದರೊಂದು ಕೆಲಸ ಮಾಡುತ್ತಿರಬೇಕು. ಕೆಲಸವೆಂದರೆ ಹಣ ಗಳಿಸುವ ಕೆಲಸವೂ ಆಗಬಹುದು ಮತ್ತು ಹಣದ ಅಪೇಕ್ಷೆ ಇಲ್ಲದೆ ಇತರರಿಗೆ ಸಹಾಯ ಹಸ್ತ ನೀಡುವ ಕೆಲಸವೂ ಆಗಬಹುದು.

ಸುಭಾಷಿತ ಎಂದರೆ ಒಳ್ಳೆಯ ಮಾತುಗಳು. ಸುಭಾಷಿತದಲ್ಲಿ ಸತ್ವವಿದೆ, ತರ್ಕವಿದೆ ಮತ್ತು ಸಕಲರೂ ಒಪ್ಪುವ ಅರ್ಥವಿದೆ. ಆದುದರಿಂದಲೇ ಸುಭಾಷಿತದಲ್ಲಿ ಬರುವ ಶ್ಲೋಕದ ಭಾಗಗಳು ಜನ ಮನಗಳಲ್ಲಿ ಆಳವಾಗಿ ಬೇರೂರಿದೆ.

ಜಯಂತಿ ತೇ ಸುಕೃತಿನೋ ರಸಸಿದ್ಧಾಹ ಕವೀಶ್ವರಃ|

ಕವಿವರ್ಯರು ಅದೃಷ್ಟವಂತರೂ ಮತ್ತು ಜಯಶೀಲರೂ. ಏಕೆಂದರೆ ಸುಭಾಷಿತದಂಥ ಕೃತಿಗಳಿಗೆ ಸಾವಿಲ್ಲ. ಉತ್ತಮ ಕೃತಿಗಳು ಬರೆದ ಕವಿಗಳು ಅಮರ ಮತ್ತು ಅವರ ಕೃತಿಯೂ ಅಮರ. ▪

ಲಹರಿ

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಕ್ರಿಕೆಟ್ (ಹಾಸ್ಯ)

ಕನಕಾಪುರ ನಾರಾಯಣ

ನಿವೃತ್ತ ಮುದುಕನೊಬ್ಬ ಮುಂಬೈನ ಗಲ್ಲಿಯಲ್ಲಿ ವಾಸಿಸುತ್ತಿದ್ದ.ಅದೇ ಗಲ್ಲಿಯಲ್ಲಿ ಯುವಕರು ಪ್ರತಿದಿನ/ರಾತ್ರಿ ಕ್ರಿಕೆಟ್ ಆಡುತ್ತಿದ್ದರು.ಗಲಾಟೆ ತಾಳಲಾರದ ಅಲ್ಲಿನ ನಿವಾಸಿಗಳು ಎಷ್ಟು ಬೇಡಿಕೊಂಡರೂ ಅವರು ಬೇರೆಕಡೆ ಮೈದಾನಕ್ಕೆ ಹೋಗಲು ಒಪ್ಪುತ್ತಿರಲಿಲ್ಲ. ಮೊದಲೇ ವಾಹನಗಳ ಸದ್ದು ಅದರ ಜೊತೆಗೆ ಯುವಕರ ಕಿರುಚಾಟ ಮುದುಕನಿಗೆ ರೋಸಿ ಹೋಗಿತ್ತು.ಒಂದು ದಿನ ಯುವಕರನ್ನೆಲ್ಲಾ ಕರೆದು "ಹುಡುಗರೇ ನನಗೆ ಕ್ರಿಕೆಟ್ ಅಂದ್ರೆ ನನಗೆ ಬಹಳ ಇಷ್ಟ ,ನೀವು ದಯವಿಟ್ಟು ಇನ್ನು ಮುಂದೆ ಇಲ್ಲೇ ದಿನ/ ರಾತ್ರಿ ಕ್ರಿಕೆಟ್ ಆಡಿದರೆ ನಿಮಗೆ ವಾರಕ್ಕೆ 25 ರೂಪಾಯಿ ಕೊಡುತ್ತೇನೆ" ಎಂದ.

ಹುಡುಗರೂ ಖುಷಿಯಿಂದ ಒಪ್ಪಿದರು. ವಾರ ಕಳೆಯಿತು ಒಪ್ಪಿದಂತೆ ಹಣವೂ ದೊರಕಿತು, ಮತ್ತೊಂದು ವಾರ ಕಳೆಯಿತು ಮುದುಕ ಬರೀ 20 ರೂಪಾಯಿ ಕೈಗಿಟ್ಟ, ಇರಲಿ , ಎಂದು ಹುಡುಗರು ಸಹಕರಿಸಿದರು. ಮುಂದಿನ ವಾರ ಬರೀ15 ರೂಪಾಯಿ ! ಅದರ ಮುಂದಿನ ವಾರ ಬರೀ 10 ರೂಪಾಯಿ!! ನಂತರ ವಾರ ಬರೀ 5 !!! "ಅರೆ ಏನ್ ಸ್ವಾಮೀ ವಾರಕ್ಕೆ 25 ರೂಪಾಯಿ ಅಂತ ಹೇಳಿ ಈಗ ಬರೀ 5 ಕ್ಕೆ ಇಳಿದಿದ್ದೀರ ? ಇದು ಯಾವ ನ್ಯಾಯ ?" ಅದಕ್ಕೆ ಮುದುಕ "ನೋಡ್ರಪ್ಪಾ ನನಗೆ ಪೆನ್ ಶನ್ ಹಣ ಬರೋದೇ ಕಡಿಮೆ ನನ್ನಿಂದ ವಾರಕ್ಕೆ 25 ರೂಪಾಯಿ ಕೊಡಕ್ಕಾಗಲ್ಲ" ಅಂದ, ಬೇಕೇ ಬೇಕೆಂದು ಹುಡುಗರು ಹಟ ಹಿಡಿದರು, ಆಗದೆಂದು ಮುದುಕ ಪಟ್ಟು ಹಿಡಿದ, ಕಡೆಗೆ ಕೋಪದಿಂದ ಮುದುಕ "ಆಗಲ್ಲಾ ಅಂದ್ರೆ ಆಗಲ್ಲ ಅದೇನ್ ಮಾಡ್ತೀರೋ ಮಾಡಿ ನೋಡೋಣ" ಎಂದ.ಹುಡುಗರು " ಲೇ ಬನ್ರೋ ಇನ್ಮೇಲೆ ಈ ಬೀದೀಲೇ ಕ್ರಿಕೆಟ್ ಆಡೋದು ಬೇಡ" ಎಂದು ಹೊರಟುಹೋದರು, ಮುದುಕನಿಗೆ ಬೇಕಾದ್ದೂ ಅದೇ ಅಲ್ವೇ ? ▪

ಶುಂಠಿ ಮೊಸರು

ಬೇಕಾಗುವ ಸಾಮಗ್ರಿಗಳು

- ಎರಡು ದೊಡ್ಡ ಹಸಿ ಶುಂಠಿ
- ಒಂದು ಬಟ್ಟಲು ಮೊಸರು
- ಅರ್ಧಚಮಚ ಸಕ್ಕರೆ
- ತೆಂಗಿನ ತುರಿ ಒಂದು ಸೌಟು
- ಒಗ್ಗರಣೆಗೆ ಎಣ್ಣೆ,ಇಂಗು,ಅರ್ಧ ಚಮಚ ಸಾಸಿವೆ ಮತ್ತು ಜೀರಿಗೆ, ಕರಿಬೇವು
- ರುಚಿಗೆ ತಕ್ಕ ಉಪ್ಪು

ಮಾಡುವ ವಿಧಾನ

- ಶುಂಠಿ ಹೆರೆದು ಕಣಕವಾಗುವಂತೆ ತೆಂಗು ಸೇರಿಸಿ ಅರೆಯಿರಿ
- ಕಣಕ ಬೆರೆಸಿ ಮೊಸರು ಕಡೆದು ಉಪ್ಪು ಸೇರಿಸಿ
- ಸಾಸಿವೆ,ಜೀರಿಗೆ,ಕರಿಬೇವು,ಇಂಗು ಒಗ್ಗರಣೆ ಹಾಕಿ ಮೊಸರಿಗೆ ಸುರುವಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಅವ್ವ ನೋಡುದ್ರೆ ಕುಳ್ಳಿ , ಮಗಳ ನೋಡುದ್ರೆ ಮಾರುದ್ದ ಅವ್ವೆ

೨. ಕಪ್ಪೆ ಮುಟ್ಟದ ಕೈಲಾಸದ ನೀರು

ಉತ್ತರಕ್ಕೆ ಪುಟ ೧೩ ನೋಡಿ

ಗೆ ...

ಹೂವನರಸದೆ ದುಂಬಿ
ಹಾವು ಸರಿಯದಿಹುದೆ
ಸಾವು ನೋವುಗಳಿರದೆ?
ಕಾವದಿರುವನೆ ಕಮಲನಾಭ

ಮಗುವನಾಡಿಸಳೆ ತಾಯಿ
ಮುಗಿಲು ಉಡದೆ ಮಳೆಯ
ನಗುವ ತೋರಳೆ ಲಲನೆ
ದಿಗಿಲುಂಟೆ ನಮ್ಮ ಜಗದೀಶಗೆ

ಬಳುಕು ಬಳ್ಳಿಗೆ ಸಹಜ
ತೊಳೆವುದು ಮಳೆಯು ಇಳೆಯ
ಸುಳಿಯುವುದು ಎಲರಿಗೆ ಕಾಯ
ಸಲಹುವವನು ನಿಜ ದೇವನು

ತರಳೆ ತಬ್ಬಳೆ ಪ್ರಿಯನ
ಬೆರಳಿಗೆ ಬಾಯ್ ಇಡದೆ ಶಿಶುವು
ಅರಳದಿಹುದೆ ಅಂಗಳದ ಹೂವು
ಮರುಕ ತೋರನೆ ಲಕುಮಿ ಸಖನು

ಬಗೆ ಬಗೆಯ ನೋವಾಡುವುದು
ಮುಗಿಯುವುದು ಬಾಳು ಕೊನೆಗೆ
ಹೊಗೆಯಾಗುವುದು ಈ ದೇಹ
ಸಿಗದೆ ಹೋದನೆ ನನಗೆ ಆ ಮಹಿಮನು

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಕಾವೇರಿ ನದಿಯ ಒಟ್ಟು ಉದ್ದ ಎಷ್ಟು? ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ ಹರಿಯುವ (ಕರ್ನಾಟಕ ಹಾಗೂ ತಮಿಳುನಾಡಿನ ಗಡಿಯಾಗಿರುವುದನ್ನು ಬಿಟ್ಟು) ದೂರ ಎಷ್ಟು?

೨. ಕೃಷ್ಣರಾಜ ಸಾಗರ ಜಲಾಶಯದ ಬಳಿ ಕಾವೇರಿ ನದಿಯೊಡನೆ ಸಂಗಮವಾಗುವ ಎರಡು ಪ್ರಮುಖ ಉಪನದಿಗಳು ಯಾವುವು? ಮತ್ತೊಂದು ಪ್ರಮುಖ ಉಪನದಿಯಾದ ಕಬಿನಿ ಕಾವೇರಿಯೊಡನೆ ಎಲ್ಲಿ ಸಂಗಮವಾಗುತ್ತದೆ?

ಸರಿ ಉತ್ತರಕ್ಕೆ ಪುಟ ೧೫ ನೋಡಿ

ಒಗಟು – ಉತ್ತರ

೧. ಸೂಜಿ ದಾರ ೨. ಎಳನೀರು

ಹಾಸ್ಯ ಚಿಲುಮೆ

ದೇವರು:ಭಕ್ತಾ ಏಳು ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ,ಎರಡು ವರವನ್ನು ಕೇಳು

ಭಕ್ತ:ಮೊದಲನೆಯದು ನನಗೆ ನಿದ್ದೆಯಲ್ಲೆ ಸಾವು ಬರಬೇಕು.

ದೇವರು: ತಥಾಸ್ತು ಸರಿ ಎರಡನೆಯದು?

ಭಕ್ತ:ಎರಡನೆಯದು ನನಗೆ ಎಂದಿಗೂ ನಿದ್ದೇನೇ ಬರಕೂಡದು.

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಮಹೇಶನಿಗಿರುವುದು ಬಲು ಉನ್ನತವಾದುದನ್ನೇ
ಸಾಧಿಸಬೇಕೆಂಬ ದೊಡ್ಡ ಆಸೆ.

೨. ಸ್ವಯಂ ಸೇವಕರೆಲ್ಲಾ ಸೇರಿ ಕೂಟ ಒಂದನ್ನು
ರಚಿಸಲು ಹೋದಾಗ ನಡೆದ ಬಾರೀ ತಿಕ್ಕಾಟ.

೩.ಈತ ಒಳ್ಳೆಯ ಸ್ವಭಾವದ ಮನುಷ್ಯ.

೪. ವ್ರತಗಳಿಗೆ ಬೇಕಾದ್ದು ಶಿಖರದ ಮೇಲೂ ಇರಬಹುದು.
ಶಿರದ ಮೇಲೂ ಇರಿಸಿಕೊಳ್ಳಬಹುದು.

೫. ಸಹಿಯೇನೂ ಹಾಕಬೇಕಿಲ್ಲ. ಬರೀ ಖಚಿತ ಪಡಿಸಿದರಾಯಿತು.

೬. ಆಸೆಪಟ್ಟ ಕೂಡಲೇ ಮೂಡಿದ ಕುತೂಹಲ?

ಉತ್ತರ: ನಮ್ಮ ಉಪಾಧ್ಯಾಯರು ಎಷ್ಟೇ ಬಲಶಾಲಿಯಾದರೂ,
ಎಲ್ಲವನ್ನೂ ಎಲ್ಲರನ್ನೂ ಸೆಳೆಯುವ ಈ ಗುಣ ಅವರಿಗಿಲ್ಲ.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ನವೆಂಬರ್ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಸೆಪ್ಟೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿದ್ದಿ
- ಶ್ರೀಧರ್ ಆರಾಧ್ಯ, ಸಿರಾ
- ಕೆ. ಎಸ್. ಮಂಜುನಾಥ್, ಬೆಂಗಳೂರು
- ಪರಮೇಶ್ವರ್, ಗೋವಾ
- ಚಂದ್ರಿಕಾ, ಕುಣಿಗಲ್
- ಆಶಾ ಮೂರ್ತಿ, ಸಿದ್ದಿ

ಸೆಪ್ಟೆಂಬರ್ ತಿಂಗಳ ಪದಪುಂಜದ ಉತ್ತರ

೧. ಜಾಯಮಾನವೇನಲ್ಲ ಆದರೂ ಮನೆಯ ಜವಾಬ್ದಾರಿ
ಇವನೇ ಹೊತ್ತು ಕೊಂಡಿದ್ದಾನೆ.

ಯ	ಜ	ಮಾ	ನ

೨. ಹಬ್ಬ ಹರಿದಿನದಲ್ಲಿ ಬಾಗಿಲನ್ನು ಅಲಂಕರಿಸಿದ್ದು.

ತೋ	ರ	ಣ

೩. ಬೇಡ ಬೇಡ ಎಂದರೂ ಗೋಪಿಯರೊಡನೆ
ಕೃಷ್ಣನಾಡಿದ ಬಣ್ಣದಾಟ.

ರಂ	ಗಿ	ನಾ	ಟ

೪. ತುತ್ತುತುತ್ತಿಗೂ ಮಗುವಿನೊಡನೆ ತಾನೂ
ತುತ್ತನ್ನಿಡಿಸಿಕೊಳ್ಳುವ ಮಾಮನ್ಯಾರು?

ಚಂ	ದ	ಮಾ	ಮ

೫. ಏನನ್ನೂ ಕದ್ದಿಲ್ಲ. ಆದರೂ ಬೇಲಿಯ ಸುತ್ತ ಇವಳದೇ ಪಹರೆ.

ಕ	ಳ್ಳಿ

೬. ಸದಾಕಾಲ ಎನ್ನಲು ಹೀಗೂ ಹೇಳಬಹುದೆ?

ಅ	ನ	ವ	ರ	ತ

ಉತ್ತರ: ಬೆಳ್ಳಿಪರದೆಯನ್ನಲಂಕರಿಸಿದ ಸುಬ್ಬರಾವ್ ರವರ
ವ್ಯವಸಾಯದ ಭೂಮಿ. ಚಿತ್ರದುರ್ಗದ ಬಳಿ ಇದೆಯೇನು?

ಚಂ	ದ	ವ	ಳ್ಳಿ	ಯ	ತೋ	ಟ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ- ಭವ್ಯ ಪ್ರಕಾಶ್, ಸಿದ್ದಿ - ಚುಕ್ಕಿಗಳು ೮-೧೫

ನೀವು ಮಾಡಿ

ತೇಲುವ ಮೊಟ್ಟೆ

ಸಂಗ್ರಹ: ಬದರಿ ತ್ಯಾಮಗೊಂಡ್ಲು

ಇಸ್ರೇಲ್ ಬಳಿ ಇರುವ ಮೃತ ಸಮುದ್ರದ (Dead Sea) ಬಗ್ಗೆ ಕೇಳಿದ್ದೀರಲ್ಲವೇ? ಈ ಸರೋವರದಲ್ಲಿ ನೀವು ಈಜದೇ ತೇಲಬಲ್ಲಿರಿ! ಆಶ್ಚರ್ಯವೇ. ಇದರ ರಹಸ್ಯ ತಿಳಿಯಲು ಈ ಪ್ರಯೋಗ ಮಾಡೋಣ ಬನ್ನಿ.

ಬೇಕಾಗುವ ಸಾಮಗ್ರಿ

- ಎರಡು ಗಾಜಿನ ಲೋಟಗಳು,
- ಎರಡು ಮೊಟ್ಟೆಗಳು,
- ಐದಾರು ಚಮಚ ಅಡುಗೆ ಉಪ್ಪು,

ವಿಧಾನ

ಎರಡು ಲೋಟಕ್ಕೂ ಕುಡಿಯುವ ನೀರನ್ನು ತುಂಬಿ. ಒಂದು ಲೋಟಕ್ಕೆ ಐದಾರು ಚಮಚ ಉಪ್ಪನ್ನು ಹಾಕಿ ಕದಡಿ.

ಇರುವ ಎರಡು ಮೊಟ್ಟೆಯನ್ನು ನಿಧಾನವಾಗಿ ಒಂದೊಂದು ಲೋಟಕ್ಕೆ ಹಾಕಿ ಏನಾಗುವುದೆಂದು ಗಮನಿಸಿ.

ಶುದ್ಧ ನೀರಿರಿರುವ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರುವುದು. ಉಪ್ಪಿನ ನೀರಿನ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರದೆ ತೇಲುವುದು

ರಹಸ್ಯ

ಯಾವುದೇ ವಸ್ತು ಮುಳುಗಬೇಕಾದರೆ ಅದರ ಸಾಂದ್ರತೆ (Density) ಹೆಚ್ಚಿರಬೇಕು. ಮೊಟ್ಟೆಯ ಸಾಂದ್ರತೆ ಶುದ್ಧ ನೀರಿನ ಸಾಂದ್ರತೆಗಿಂತ ಜಾಸ್ತಿ. ಹೀಗಾಗಿ ಮುಳುಗತ್ತದೆ. ಆದರೆ, ನೀರಿಗೆ ಉಪ್ಪು ಬೆರೆಸುತ್ತಾ ಹೋದಂತೆ, ನೀರಿನ ಸಾಂದ್ರತೆ ಮೊಟ್ಟೆಯ ಸಾಂದ್ರತೆಗಿಂತ ಹೆಚ್ಚಾಗುತ್ತಾ ಹೋಗುತ್ತದೆ. ಈ ಕಾರಣದಿಂದ ಉಪ್ಪುನೀರಿನಲ್ಲಿ ಹಾಕಿದ ಮೊಟ್ಟೆ ತೇಲುತ್ತದೆ. ▪

ಜಾಣ ಕರ್ನಾಟಕ – ಉತ್ತರ

ಉತ್ತರಗಳು: ೧. ಕಾವೇರಿ ನದಿಯ ಒಟ್ಟು ಉದ್ದ ೭೬೫ ಕಿಲೋಮೀಟರ್ ಗಳು. ಕರ್ನಾಟಕದಲ್ಲಿ ಹರಿಯುವ ದೂರ ಸುಮಾರು ೩೨೦ ಕಿಲೋಮೀಟರ್ ಗಳು.
೨. ಲಕ್ಷ್ಮಣತೀರ್ಥ ಮತ್ತು ಹೇಮಾವತಿ ನದಿಗಳು ಕೃಷ್ಣರಾಜ ಸಾಗರದ ಬಳಿ ಕಾವೇರಿಯನ್ನು ಸೇರಿದರೆ, ತಿರುಮಕೂಡಲು ನರಸೀಪುರದ ಬಳಿ ಕಬಿನಿ ಕಾವೇರಿಯರ ಸಂಗಮವಾಗುತ್ತದೆ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಅಸ್ತಿತ್ವ

ಕನ್ನಡ ಚಲನಚಿತ್ರ

Event Cinemas Liverpool, 13 Nov 2016 @ 3 PM, Tickets $15

Contact: Narayana - 0423 634 979, Nagabhushan - 0433 763 911

Arun - 0431 796 344

SCULPTURE BY THE SEA BONDI

Monday 24 October to Sunday 06 November 2016

http://www.sculpturebythesea.com

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.